ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೬ ಮೇ -೨೦೧೬ ಸಂಚಿಕೆ - ೧೦

ಅಸ್ಪೃಶ್ಯತೆ ಸವರ್ಣೀಯರ ಸಮಸ್ಯೆ

*****

ಸಮಗ್ರ ಗಾಂಧಿ, ಸಮಗ್ರ ಅಂಬೇಡ್ಕರ

*****

ಮಹಾತ್ಮ ಗಾಂಧಿ ಅಸ್ತಿ ಚಿತಾಭಸ್ಮ ವಿಸರ್ಜನೆಯ ದಿನ

****

ಕಾಡಿಗೆ ರಕ್ಕಸ ರೈಲು

ಜನಪದ ವಿಚಾರದಲ್ಲಿ

ಮೇ – ೨೦೧೬

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮೇ - ೨೦೧೬
ಸಂಪುಟ - ೧೬
ಸಂಚಿಕೆ - ೧೦

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.org

ಉಳಿದಿರುವ ಕಾಯಕ

ಕಾಯುತ್ತ ಕೂರುವುದೇ ಉಳಿದರುವ ಕಾಯಕ
ಇದ್ದೀತು ಭವಿತವ್ಯ ಆಶಾದಾಯಕ

ಬಯಲಾದ ಕಾಡಲ್ಲಿ ಕರುಣೆಯೆಂಬ ಮಳೆಗೆ
ಬತ್ತಿರುವ ನಾಲೆಯಲಿ ಪ್ರೇಮವೆಂಬ ಹೊಳೆಗೆ
ಬೇಗುದಿಯ ಕುಲುಮೆಯಲಿ ತಾಳ್ಮೆಯ ಬಗೆಯನ್ನು
ಸುತ್ತಲಿನ ಕೊಳಕಿನಲಿ ನಿರ್ಮಲ ನಗೆಯನ್ನು

ಕಾಯುತ್ತ ಕೂರುವುದೇ ಉಳಿದಿರುವ ಕಾಯಕ
ಇದ್ದೀತು ಭವಿತವ್ಯ ಆಶಾದಾಯಕ

ಬೇಲಿಗಳ ಸಾಲಲ್ಲಿ ಸಹಜ ಪ್ರೀತಿಗಾಗಿ
ಶಾಸನದ ಗೋಜಲ್ಲಿ ನ್ಯಾಯ ನೀತಿಗಾಗಿ
ಖಾಲಿ ತಲೆ ಹೊಟ್ಟೆಯಲಿ ಪ್ರಜಾತಂತ್ರವನ್ನು
ಬಲವಿರದ ರೆಟ್ಟೆಯಲಿ ಸಮತಾಮಂತ್ರವನು

ಕಾಯುತ್ತ ಕೂರುವುದೇ ಉಳಿದರುವ ಕಾಯಕ
ಇದ್ದೀತು ಭವಿತವ್ಯ ಆಶಾದಾಯಕ

ಸಿಹಿಯಾದ ಭ್ರಮೆಗಳಲಿ ಕಹಿಮದ್ದು ಸತ್ಯವ
ಘೋಷಗಳ ಆವೇಶದಲಿ ಸಮಚಿತ್ತ ಕಾವ್ಯವ
ಗದ್ದಲದ ಸಂತೆಯಲಿ ಸ್ನಿಗ್ಧ ಸಂಗೀತವನು
ದಾಂಧಲೆಯ ದೊಂಬಿಯಲಿ ಸ್ವಂತ ಏಕಾಂತವನು

ಕಾಯುತ್ತ ಕೂರುವುದೇ ಉಳಿದರುವ ಕಾಯಕ
ಇದ್ದೀತು ಭವಿತವ್ಯ ಆಶಾದಾಯಕ

-ಬಿ.ಆರ್.ಲಕ್ಷ್ಮಣರಾವ್
(ಕಸ್ತೂರಿ ಸಾಭಾರ)

ಅಸ್ಪೃಶ್ಯತೆ ಸವರ್ಣೀಯರ ಸಮಸ್ಯೆ

-ಸುರೇಂದ್ರ ಕೌಲಗಿ

ಅಸ್ಪೃಶ್ಯತೆಯನ್ನು ಯಾರು ಆಚರಿಸುತ್ತಾರೋ ಅದು ಅವರ ಸಮಸ್ಯೆ ಎಂಬ ದೃಷ್ಟಿಯಿಂದ ನೋಡಿದಾಗ ಅಸ್ಪೃಶ್ಯತೆ ಆಚರಿಸುವ ವ್ಯಕ್ತಿಗಳನ್ನು ಸಂವೇದನಶೀಲರನ್ನಾಗಿ ಮಾಡುವ ಕಾರ್ಯಕ್ರಮ ಹಾಕಿಕೊಳ್ಳಲು ಸಾಧ್ಯವಾಗುತ್ತದೆಂಬುದಾಗಿ ಸಿಗರನಹಳ್ಳಿಯಲ್ಲಿ ಇತ್ತೀಚಿಗೆ ಸವರ್ಣೀಯ ಮತ್ತು ದಲಿತರ ಮಧ್ಯೆ ನಡೆದ ಘರ್ಷಣೆಯ ಸಂದರ್ಭದಲ್ಲಿ ದೇವನೂರರು ಈ ಮಾತನ್ನು ಹೇಳಿದ್ದಾರೆ (ಪ್ರ.೨೩.೪) ಇದೇ ರೀತಿಯ ಅಭಿಪ್ರಾಯವನ್ನು ಗಾಂಧೀಜಿಯವರು ೮೪ ವರ್ಷಗಳ ಹಿಂದೆ ೧೯೩೨ ರಲ್ಲಿ ಲಂಡನ್‌ನಲ್ಲಿ ನಡೆದ ಎರಡನೆಯ ದುಂಡುಮೇಜಿನ ಪರಿಷತ್‌ನಲ್ಲಿ ಹೇಳಿದ್ದರು. ಅಸ್ಪೃಶ್ಯತೆಯನ್ನು ಆಚರಿಸುವ ಪ್ರತಿಯೊಂದು ಸಮೂದಾಯದಲ್ಲೂ ಸಂವೇದನಾಶೀಲ ವ್ಯಕ್ತಿಗಳು ಇರುತ್ತಾರೆ. ಅಂಥ ವ್ಯಕ್ತಿಗಳ ಪ್ರಯತ್ನದಿಂದಾಗಿ ಸಮಾಜದಲ್ಲಿರುವ ಅಸ್ಪೃಶ್ಯತೆಯನ್ನು ಹೊಗಲಾಡಿಸಬೇಕೆಂಬುದೇ ಗಾಂಧೀಜಿಯವರ ಬಲವಾದ ಅಭಿಪ್ರಾಯವಾಗಿತ್ತು. ಅಲ್ಲಿ ಗಾಂಧೀಜಿ ಈ ರೀತಿ ಹೇಳಿದರು, "ಈ ದುಂಡುಮೇಜಿನ ಪರಿಷತ್‌ಗೆ ಮತ್ತು ಇಡೀ ಜಗತ್ತಿಗೆ ಗೊತ್ತಾಗಬೇಕಾದ ಸಂಗತಿ ಏನೆಂದರೆ ಅಸ್ಪೃಶ್ಯತೆ ಅಸ್ಪೃಶ್ಯರಿಗೆ ನಾಚಿಕೆ ಉಂಟುಮಾಡುವ ಸಂಗತಿಯಾಗಿರದೆ ಸುಧಾರಣೆಯ ಪರವಾಗಿರುವ ಹಿಂದು ಸಮಾಜಸುಧಾರಕರಿಗೆ ನಾಚಿಕೆಯ ವಿಷಯವಾಗಿದೆ. ಆದ್ದರಿಂದ ಅಸ್ಪೃಶ್ಯತೆಯ ಈ ಕಳಂಕವನ್ನು ಹಿಂದುಧರ್ಮದಿಂದ ತೊಡೆದುಹಾಕಲು ಶಪಥಮಾಡಿದ್ದಾರೆ. ಅಸ್ಪೃಶ್ಯತೆ ಜೀವಂತವಾಗಿರುವುದಕ್ಕಿಂತಲೂ ಹಿಂದೂಧರ್ಮ ಸತ್ತುಹೊಗುವುದನ್ನು ನಾನು ಬಯಸುತ್ತೇನೆ. ಅಸ್ಪೃಶ್ಯರು ಮುಸ್ಲಿಂ ಧರ್ಮಕ್ಕಾಗಲಿ, ಅಥವಾ ಕ್ರಿಶ್ಚಿಯನ್ ಧರ್ಮಕ್ಕಾಗಲೀ, ಮತಾಂತರಗೊಳ್ಳುವುದಕ್ಕೆ ನನ್ನ ಅಭ್ಯತಂರವಿಲ್ಲ ಆದರೆ ದೇಶದಲ್ಲಿ ಉಂಟಾಗುವ ಆಂತರಿಕ ನಾಗರೀಕ ಯುದ್ಧ ಮತ್ತು ಹಿಂಧು ಧರ್ಮದಲ್ಲಿಯ ಆಘಾತವನ್ನು ಸಹಿಸಲಾರೆ. ಅದು ಹಿಂದುಧರ್ಮಕ್ಕಾಗಲಿ ಅಥವಾ ಶೋಷಿತವರ್ಗಕ್ಕಾಗಲಿ ಒಳೆಯದಾಗುವುದಿಲ್ಲ". ಗಾಂಧೀಜಿಯವರ ಈ ಭಯ ನಿಜವಾಗುತ್ತಿರುವುದನ್ನು ನಾವು ದಿನಬೆಳಗಾದರೆ ಕಾಣುತ್ತಿದ್ದೇವೆ. ಭಾರತದೆಲ್ಲೆಡೆಯಲ್ಲಿ ಜಾತಿಸಂಘರ್ಷಗಳಾಗುತ್ತಿವೆ. ಸಿಗರನಹಳ್ಳಿಯಲ್ಲಿ ನಡೆದ ಅಂಥ ಅಮಾನುಷ ಘಟನೆ ಇತ್ತೀಚಿಗಿನ

ಉದಾಹರಣೆಯಷ್ಟೇ.

ಯಾರಿಂದಲ್ಲೂ ಯಾವ ಧರ್ಮವನ್ನೂ ಸಾಯಿಸಲು ಸಾಧ್ಯವಿಲ್ಲ. ಜಗತ್ತಿನಲ್ಲಿ ಯಾವ ಧರ್ಮವೂ ಪರಿಪೂರ್ಣವಾಗಿಲ್ಲ. ಪರಿಪೂರ್ಣವಾಗಿದ್ದರೆ ಅವುಗಳನ್ನು ಆಚರಿಸುವುದು ಸಾಮಾನ್ಯನಿಗೆ ಕಷ್ಟವೇ ಸರಿ. ಆದ್ದರಿಂದ ಧರ್ಮಗಳಲ್ಲಿರಬಹುದಾದ ದೋಷಗಳನ್ನು ಆಯಾ ಧರ್ಮೀಯರು ನಿವಾರಿಸಬೇಕೇ ಹೊರತು ಧರ್ಮವನ್ನೇ ನಾಶಮಾಡುವ ವಿಚಾರ ಅಸಾಧ್ಯವಾದುದು. ಆದ್ದರಿಂದಲೆ ಗಾಂಧೀಜಿಯವರು ಹಿಂದುಧರ್ಮದಲ್ಲಿಯ ದೋಷಗಳನ್ನು ನಿವಾರಿಸಿ ಅದೊಂದು ಉತ್ಕೃಷ್ಟ ಧರ್ಮವಾಗಬೇಕೆಂದು ಬಯಸಿದ್ದರು. ಇಸ್ಲಾಂ ಮತ್ತು ಇಸಾಯಿ ಧರ್ಮಗಳು ಅಸ್ಪೃಶ್ಯತೆಯನ್ನು ಆಚರಿಸದೇ ಇರುವಾಗ ಹಿಂದುಧರ್ಮ ಅಸ್ಪೃಶ್ಯತೆ ಆಚರಿಸುವುದೆಂದರೆ ಮನುಷ್ಯತ್ವದತ್ತ ವಿಮುಖರಾದಂತೆ ಅದಕ್ಕಾಗಿ ಅವರು ತಮ್ಮ ಜೀವಿತದ ಕೊನೆಯ ದಿನದ ವರೆಗೂ ಹಿಂದುಧರ್ಮದಲ್ಲಿರಬಹುದಾದ ದೋಷಗಳನ್ನು ನಿವಾರಿಸಲು ಪ್ರಯತ್ನಿಸಿದರು. ಅದಕ್ಕಾಗಿ ಸಹೃದಯಿ ಸವರ್ಣೀಯರನ್ನು ಪ್ರೇರೇಪಿಸಿದರು. ಗಾಂಧೀಜಿಯವರ ಕರೆಗೆ ಮನ್ನಣೆಕೊಟ್ಟು ದೇಶದಲ್ಲಿರುವ ಎಲ್ಲ ದೇವಸ್ಥಾನಗಳು ಮತ್ತು ಸಾರ್ವಜನಿಕ ಸ್ಥಳಗಳು, ಕೆರೆಕುಂಟೆಗಳು ಅಸ್ಪೃಶ್ಯರಿಗೆ ತೆರೆಯಲ್ಪಟ್ಟವು. ಗಾಂಧೀಜಿಯವರು ಕೈಗೊಂಡಿದ್ದ ಆಮರಣ ಉಪವಾಸದ ಕಾರಣದಿಂದಾಗಿ ಹಿಂದುಧರ್ಮ ತನ್ನನ್ನು ಒಮ್ಮೆಲೆ ಬದಲಾಯಿಸಿಕೊಂಡಿತು. ಮತ್ತು ಯುಗಧರ್ಮಕ್ಕೆ ಅನುಸಾರವಾಗಿ ತೆರೆದುಕೊಂಡಿತು. ಅಸ್ಪೃಶ್ಯತೆಯನ್ನು ಹಿಂದುಧರ್ಮದಿಂದ ಹೋಗಲಾಡಿಸಲು ನೂರಾರು ವರ್ಷಗಳೇ ಬೇಕಾಗಿತ್ತು. ಆದರೆ ಅರವತ್ತಮೂರು ವರ್ಷದ ಗಾಂಧೀಜಿಯವರು ಆಮರಣ ಉಪವಾಸದ ತೀರ್ಮಾನ ಸವರ್ಣೀಯ ಹಿಂದುಗಳಲ್ಲಿ ಮತ್ತು ಸವರ್ಣೀಯೇತರ ಜನರಲ್ಲಿ ಅಸ್ಪೃಶ್ಯತೆ ವಿನಾಶದ ಜರೂರಿನ ಬಗ್ಗೆ ಜಾಗೃತಿ ಉಂಟುಮಾಡಿತು. ಇದು ಕೇವಲ ಆರು ದಿನ ಐದು ತಾಸಿನ ಅವಧಿಯಲ್ಲಿ ಸಾಧ್ಯವಾಯಿತು. ಅಸ್ಪೃಶ್ಯತೆಯನ್ನು ಬುಡಸಮೇತ ಕಿತ್ತುಹಾಕುವ ಪ್ರಯತ್ನಕ್ಕೆ ನಾಂದಿಹಾಡಿತು. ಪೂನಾ ಒಪ್ಪಂದದ ಸಮಯದಲ್ಲಿ ಡಾ॥ಬಿ.ಆರ್.ಅಂಬೇಡ್ಕರವರು ಗಾಂಧೀಜಿಯವರಿಂದ ನಿರ್ದಿಷ್ಟವಾದ ಸಲಹೆಗಳಿಗಾಗಿ ಒತ್ತಾಯಿಸಿದಾದರೂ. ಅದಕ್ಕಾಗಿ ಹಟಮಾಡದೆ ಒಪ್ಪಂದಕ್ಕೆ ಸಂಬಂಧಿಸಿದ ಸಲಹೆಗಳನ್ನು ತಾವು ಪರಿಶೀಲಿಸುವುದಾಗಿ ಹೇಳಿದರು. ಅದೇ ವೇಳೆಗೆ ತಾವು ಶರಣಾಗುವುದನ್ನು ನಿರೀಕ್ಷಿಸಕೂಡದೆಂದು ಡಾ॥ಅಂಬೇಡ್ಕರ್ ಸ್ಪಷ್ಟವಾಗಿ ಹೇಳಿದರು. ಆಗ ಘನಶ್ಯಾಮದಾಸ ಬಿರ್ಲಾರವರು ಮಧ್ಯ ಪ್ರವೇಶಿಸುತ್ತಾ ಹಿಂದುಗಳೆ ಅವರಿಗೆ ಶರಣಾಗತರಾಗಲು ಬಯಸುತ್ತಾರೆ ಎಂದು ಹೇಳಿದರು.

ಅನಂತರ ಸ್ವಲ್ಪ ಚರ್ಚೆಯಾದ ಬಳಿಕ ಪರಿಷತ್ ಮಾರನೆ ದಿನಕ್ಕೆ ಮುಂದುವರಿಸಲ್ಪಟ್ಟಿತು. ಗಾಂಧೀಯವರ ಉಪವಾಸ ಮುಗಿಯುವ ಹೊತ್ತಿಗೆ ಸಹೃದಯಿ ಮತ್ತು ಸಂವೇದನಾಶೀಲ ಹಿಂದುಗಳಲ್ಲಿ ಮನಪರಿವರ್ತನೆಯಾಗಿ ಅಸ್ಪೃಶ್ಯತೆ ಆಚರಿಸುವುದು ಅಮಾನವೀಯ. ಅಸ್ಪೃಶ್ಯತೆಯ ಸಮಸ್ಯೆ ನಿಜವಾಗಿ ಇರುವುದು ಅಸ್ಪೃಶ್ಯರದಲ್ಲ. ಸವರ್ಣೀಯ ಹಿಂದುಗಳದೇ ಎಂಬ ಭಾವನೆ ಅವರಲ್ಲಿ ಮೂಡಿತು. ಶಾಸಕಾಂಗ ಮಾಡಲಾರದ ಜಾದುವನ್ನು ಗಾಂಧೀಜಿಯವರ ಆತ್ಮಕ್ಲೇಶದ ತೀರ್ಮಾನ ಮಾಡಿತು. ತತ್‌ಪರಿಣಾಮವಾಗಿ ಇಂದು ಸಂವೇದನಾಶೀಲ ಸವರ್ಣೀಯರಲ್ಲಿ ಅಸ್ಪೃಶ್ಯತಾಚರಣೆ ಇಲ್ಲವೆಂದೇ ಹೇಳುಬಹುದು. ಒಂದುವೇಳೆ ಅದು ಇನ್ನೂ ಅಲ್ಲಲ್ಲಿ ಉಳಿದಿದ್ದರೆ ದೇವನೂರರು ಹೇಳುವಂತೆ ಅಸ್ಪೃಶ್ಯತೆ ಆಚರಿಸುವ ವ್ಯಕ್ತಿಗಳನ್ನು ಸಂವೇದನಾಶೀಲರನ್ನಾಗಿ ಮಾಡುವ ಕಾರ್ಯಕ್ರಮ ಹಾಕಿಕೊಳ್ಳಬೇಕು. ಸಿಗರನಹಳ್ಳಿಯಲ್ಲರುವ ಸ್ವಸಹಾಯ ಸಂಘಗಳ ಎಲ್ಲ ಕೋಮಿನ ಮಹಿಳೆರೆಲ್ಲರೂ ಸೇರಿ ಪ್ರಯತ್ನಿಸಿದಲ್ಲಿ ಆ ಹಳ್ಳಿಯಲ್ಲಿ ಉಂಟಾಗಿದ್ದ ಸಮಸ್ಯೆಯನ್ನು ಹೂ ಬಿಡಿಸಿದಂತೆ ಬಗೆಹರಿಸಬಹುದೆಂದು ಕವಿ ಸುಬ್ಬು ಹೊಲಿಯಾರ್ ಹೇಳಿರುವ ಮಾತು ಇದೇ ದಾಟಿಯುಲ್ಲಿದೆ. ೧೯೩೨ ಸೆಪ್ಟೆಂಬರ್ ೧೭ರಂದು ಮುಂಬೈಯಲ್ಲಿರುವ ಹಿಂದು ಮಹಿಳೆಯರು ಸಭೆನಡೆಸಿ ಹಿಂದು ಧರ್ಮದಲ್ಲಿಯ ಅಸ್ಪೃಶ್ಯತೆಯನ್ನು ಆಮೂಲಾಗ್ರವಾಗಿ ಕಿತ್ತುಹಾಕುವುದಾಗಿ ಘೋಷಿಸಿದ್ದು ಇಲ್ಲಿ ಜ್ಞಾಪಕಕ್ಕೆ ಬರುತ್ತದೆ. ಗಾಂಧೀಜಿಯವರು ಆಮರಣ ಉಪವಾಸ ಪ್ರಾರಂಭಿಸುವ ದಿನ ಪತ್ರಿಕಾ ಸಂದರ್ಶನ ಕೊಡುತ್ತಾ "ಅಸ್ಪೃಶ್ಯತೆಯ ವಿರುದ್ಧದ ನನ್ನ ಹೋರಾಟ ಮಾನವಧರ್ಮದಲ್ಲಿರುವ ಕೊಳೆಯ ವಿರುದ್ಧ" ಎಂದು ಹೇಳಿದರು. ಆದ್ದರಿಂದ ಸಂವೇದನಶೀಲರಾದ ಅಸ್ಪೃಶ್ಯರು ಮತ್ತು ಸವರ್ಣೀಯರು ಕೂಡಿಕೊಂಡು ಹಿಂದುಧರ್ಮದಲ್ಲಿರುವ ಅಸ್ಪೃಶ್ಯತೆಯ ಕೊಳೆಯನ್ನು ನಿವಾರಿಸಬಹುದೇ ಹೊರತು ಮನೆ-ಮನಗಳಲ್ಲಿ, ಮನುಷ್ಯನ ಭಾವನೆ ಮತ್ತು ವಿಚಾರಗಳಲ್ಲಿ ಇರುವ ಅಸ್ಪೃಶ್ಯತೆಯ ದುರ್ಗಂಧವನ್ನು ಹೋಗಲಾಡಿಸಲು ಅದಕ್ಕೆ ಸಾಮಾಜಿಕ ಪ್ರಯತ್ನವೇ ಆಗಬೇಕು, ದ್ವೇಷ ಅಸೂಯೆಗಳ ಸ್ಥಾನದ ಬದಲಿಗೆ ಸ್ನೇಹ ಮತ್ತು ಪ್ರೇಮದ ವಾತಾವರಣ ಎಲ್ಲೆಲ್ಲೂ ಹರಡಬೇಕು. ಡಾ॥ಅಂಬೇಡ್ಕರ ಮತ್ತು ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣೆಯ ಮಾರ್ಗಗಳು ಭಿನ್ನವಾಗಿದ್ದಿರಬಹುದು. ಆದರೆ ಅವರ ಗುರಿ ಒಂದೇಯಾಗಿತ್ತು.

ಸಮಗ್ರ ಗಾಂಧಿ, ಸಮಗ್ರ ಅಂಬೇಡ್ಕರ್

-ಯತಿರಾಜ್ ಬ್ಯಾಲಹಳ್ಳಿ

ಇಂದು ದಲಿತ ಚಳವಳಿಗಳು ನಡೆಯುತ್ತುರುವ ಮಾರ್ಗಯಾವುದು? ದಲಿತ ಚಳವಳಿ ಇಡುತ್ತಿರುವ ಹೊಸ ಹೆಜ್ಜೆಗಳು ಸ್ವಾಗತಾರ್ಹವಾದರೂ, ಎಷ್ಟು ಪ್ರಮಾಣದಯಶಸ್ಸನ್ನು ಗಳಿಸುತ್ತಿದೆ ಎಂದು ಪ್ರಶ್ನಿಸಿಕೊಳ್ಳಬೇಕಾಗಿದೆ.

ಡಾ.ಬಿ.ಆರ್.ಅಂಬೇಡ್ಕರ್ ಅವರು ದಲಿತರಿಗೆ ಶಿಕ್ಷಣ, ಸಂಘಟನೆ, ಹೋರಾಟಕ್ಕೆ ಕರೆ ಕೊಟ್ಟರು. ಇಂದು ದಲಿತರು ಈ ಮೂರನ್ನು ಪಾಲಿಸುತ್ತಾ ಇದ್ದರೂ ವ್ಯವಸ್ಥಿತವಾದ ಹೆಜ್ಜೆ ಇಡುತ್ತಿಲ್ಲ ಎಂದು ಅನಿಸುತ್ತಿದೆ. ಸಂಘಟನೆಯ ಜತೆಗೆ ಸೈದ್ಧಾಂತಿಕ ವಿಘಟನೆಯೂ ಆಗುತ್ತಿದೆ ಎಂಬುದು ಹೊಸ ತಲೆಮಾರಿನ ದಲಿತ ಸಂಘಟಕರಿಗೆ ತಿಳಿಯುತ್ತಿಲ್ಲ.

ಗಾಂಧಿ ಅಂಬೇಡ್ಕರ್ ನಡುವಿನ ಸೈದ್ಧಾಂತಿಕ ಹೋರಾಟವನ್ನು ಮುಂದಿಟ್ಟುಕೊಂಡು ಪದೇ ಪದೇ ಹಿರಿಯ ಚಳುವಳಿಕಾರರನ್ನು ಅಣಕಿಸುವುದು, ನೀವೇನು ಮಾಡಿದಿರಿ ಎಂದು ವೇದಿಕೆಗಳಲ್ಲಿ ಪ್ರಶ್ನಿಸುವುದು, ಗಾಂಧಿಯನ್ನು ಅಂಬೇಡ್ಕರ ಅವರಿಗೆ ಸಮನಾಗಿ ಪರಿಗಣಿಸಿ ಅಂಬೇಡ್ಕರರಿಗೆ ದ್ರೋಹ ಬಗೆಯುತ್ತಿದ್ದೀರಿ ಎಂದು ಹಿರಿಯ ಚಳವಳಿಗಾರರನ್ನು ತೆಗಳುವುದು.... ಇತ್ಯಾದಿ ವಾಗ್ಯುದ್ಧಗಳನ್ನು ನಾವು ಆಗಾಗ ಕಾಣುತ್ತಿದ್ದೇವೆ.

ಹೊಸ ಚಳವಳಿಯನ್ನು ರೂಪಿಸಬೇಕು ಎಂದು ವೇದಿಕೆಗಳಲ್ಲಿ ಈ ವಾಗ್ಯುದ್ಧವೇ ಮೇಲಾಗಿ ವೇದಿಕೆಯ ಉದ್ದೇಶವನ್ನೇ ಮರೆತು, ಹಿರಿಯ ಚಳವಳಿಕಾರರನ್ನು ನಿಂದಿಸುವುದರಲ್ಲೇ ಕಾಲಹರಣ ಮಾಡುತ್ತಾ ದಾರಿ ತಪ್ಪುತ್ತಿದ್ದಾರೆ. ಸಂಘಟನೆಯಲ್ಲಿ ಆಗುತ್ತಿದೆ?

ಗಾಂಧಿ ಟೀಕೆಯಷ್ಟೇ ಚಳವಳಿಯ ಉದ್ದೇಶವೇ? ಇದರೊಳಗೆಯೇ ಕಳೆದು ಹೋಗುತ್ತಿರುವ ದಲಿತ ಚಳವಳಿಯ ನಾಳೆಗಳು ಭಾರತದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಸರಿಯಾಗಿ ಗ್ರಹಿಸುತಿಲ್ಲ ಎನಿಸುತ್ತಿದೆ. ಇಂದಿನ ವಿದ್ಯಮಾನಗಳಿಗೆ ತೆರೆದುಕೊಂಡರೆ ಅಂಬೇಡ್ಕರ್ ಜತೆಗೆ ಗಾಂಧಿಯೂ ಪ್ರಸ್ತುತ ಎನಿಸದಿರದು.

ಡಾ॥ ಶಿವಕುಮಾರ್, ರಘೋತ್ತಮ ಹೊ.ಬ. ಅವರಂತಹ ದಲಿತ ಯುವ ಬರಹಗಾರರು ಗಾಂಧಿ-ಅಂಬೇಡ್ಕರರ ನಡುವಿನ ಸೈದ್ಧಾಂತಿಕ ಹೋರಾಟದಲ್ಲಿ ದಲಿತರಿಗಾದ ಅನ್ಯಾಯವನ್ನು ತಿಳಿಸಿಕೊಡುತ್ತಾ ಗಾಂಧಿ ಇರದ ದಲಿತ ಚಳುವಳಿಗೆ ಪೂರಕವಾಗಿ ಬರೆಯುತ್ತಿದ್ದಾರೆ. ದಲಿತ ಚಳುವಳಿಯ ನಡೆ ಪ್ರಸ್ತುತ ವಿದ್ಯಮಾನಕ್ಕೆ ತೆರೆದುಕೊಳ್ಳತ್ತಿಲ್ಲ ಎಂಬುದು ಸ್ಪಷ್ಟವಾಗುತ್ತಿದೆ.

ಇಂದು ಎರಡು ವಿಧದ ಗಾಂಧಿ ನಮ್ಮೆದುರಿಗಿದ್ದಾರೆ
೧. ಅಂಬೇಡ್ಕರ್ ದೃಷ್ಟಿಯ ಗಾಂಧಿ ೨. ಗೋಡ್ಸೆ ದೃಷ್ಟಿಯ ಗಾಂಧಿ
ಆಗಿರುವ ಗಾಯವನ್ನು ಮತ್ತೆಮತ್ತೆ ಕೆರೆದರೆ ಅಥವಾ ಕೆದಕಿದರೆ ಗಾಯವೂ ಮತ್ತೆ ಉಲ್ಬಣವಾಗುತ್ತಲೇ ಇರುತ್ತದೆ. ಅದರ ಬದಲು ಮುಲಾಮು ಹಚ್ಚಿದರೆ ಗಾಯವನ್ನೇ ವಾಸಿ ಮಾಡಬಹುದು. ಅಂಬೇಡ್ಕರ್ ದೃಷ್ಟಿಯ ಗಾಂಧಿ ನಿಜವಾಗಿಯೂ ದಲಿತರಿಗೆ ದ್ರೋಹ ಬಗೆದು, ಜಾತಿಯ ಸಂಕೋಲೆಯಲ್ಲಿಯೇ ಅಸ್ಪೃಶ್ಯರು ಇರುವಂತೆ ಮಾಡಿದರು. ದಲಿತರಿಗೆ ಸಿಗಬೇಕಿದ್ದ ಪ್ರತ್ಯೇಕ ಮತದಾನದ ಹಕ್ಕನ್ನೇ ಕಿತ್ತುಕೊಂಡು ದಲಿತರು ರಾಜಕೀಯ ಶಕ್ತಿಗಳಾಗುವುದನ್ನು ತಪ್ಪಿಸಿ ಕಾಂಗ್ರೇಸ್ ಗುಲಾಮಗಿರಿಗೆ ಒಳಗಾಗುವಂತೆ ಮಾಡಿದರು. ಇದು ಗಾಂಧಿ ದಲಿತರೆಗೆ ಮಾಡಿರುವ ಗಾಯ. ಆದರೆ, ಅಂದು ಆಗಿರುವ ಗಾಯವನ್ನು ಇಂದು ಕೂಡ ವಾಸಿಯಾಗಲು ಬಿಡುತ್ತಿಲ್ಲ.

ಇನ್ನು ಗೋಡ್ಸೆ ದೃಷ್ಟಿಯ ಗಾಂಧಿ. ಇಂದು ಭಾರತವನ್ನು ನಿಜವಾಗಿಯೂ ಕಾಡುತ್ತಿರುವುದು ಗೋಡ್ಸೆ ನೋಟದ ಗಾಂಧಿ. ಗಾಂಧಿಯನ್ನು ಗೋಡ್ಸೆ ದೃಷ್ಟಿಯಲ್ಲಿ ನೋಡುವವರನ್ನು, ನೀವು ಗಾಂಧಿಯನ್ನು ಏಕೆ ವಿರೋಧಿಸತ್ತೀರಿ ಎಂದು ಕೇಳಿದರೆ ಅವರು ಕೊಡುವ ಉತ್ತರ ನಮಗೆಲ್ಲ ಗೊತ್ತಿದೆ. "ಗಾಂಧಿ ಒಬ್ಬ ಮುಸ್ಲಿಂ ಪರವಾದಿ. ಆತ ಪಾಕಿಸ್ತಾನಕ್ಕೆ ಹೆಚ್ಚು ಪ್ರೀತಿ ತೋರಿದ. ಆತ ದೇಶಪ್ರೇಮಿಯಲ್ಲ. ಹಿಂದೂಗಳಿಗೆ ಆತ ವಿರುದ್ಧವಿದ್ದ. ಹೀಗಾಗಿ ಗೋಡ್ಸೆ ಕೊಂದು ಮಹಾನ್ ದೇಶಭಕ್ತನಾದ" ಎನ್ನುತ್ತಾರೆ.

ಗಾಂಧಿ ಹಿಂದೂ ಪರವಾದಿಯಾದರೂ ಆರ್.ಎಸ್.ಎಸ್.ಬಿತ್ತುವ ಹಿಂದುತ್ವವಾದಿಯಾಗಿರಲಿಲ್ಲ. ಇಂದು ಭಾರತ ಬಲ ಪಂಥೀಯರ ವಂಚನೆಯ ಜಾಲಕ್ಕೆ, ಅವರು ಬಿತ್ತುತ್ತಿರುವ ಹುಸಿದೇಶಭಕ್ತಿ ಮತ್ತು ಹಿಂದೂರಾಷ್ಟ್ರ ಪರಿಕಲ್ಪನೆಯಜ್ವಾಲೆಗೆ ಬಲಿಯಾಗುತ್ತಿದೆ. ಒಂದಂತೂ ಸತ್ಯ; ಗಾಂಧಿ ನಿರ್ಲಕ್ಷ್ಯಕ್ಕೊಳಗಾಗುತ್ತಾದ್ದಾರೆ. ವಿದೇಶಗಳು ಭಾರತವನ್ನು ಗಾಂಧಿಯ ನೆಲೆಯಲ್ಲಿ ನೋಡುತ್ತವೆ. ಹೀಗಾಗಿಯೇ ಪ್ರಧಾನಿ ಮೋದಿಯವರು ಹೋದ ಬಂದಕಡೆಯೆಲ್ಲ ಗಾಂಧಿ ಜಪ ಮಾಡುತ್ತಾರೆ. ಯಾವ ಬಂಡವಾಳಶಾಹಿ ವ್ಯವಸ್ಥೆಯನ್ನು ಗಾಂಧಿ ವಿರೋಧಿಸಿದ್ದರೋ, ಅದೇ ಗಾಂಧಿ, ಇಂದು ಮೋದಿವರಿಗೆ ಬಂಡವಾಳಶಾಹಿಗಳ ಮುಂದೆ ಮಾತನಾಡಲು ಬಳಕೆಯಾಗುತ್ತಿದ್ದಾರೆ. ಆರ್.ಎಸ್.ಎಸ್‌ನಲ್ಲಿರುವ ಯುವಕರು ನಿಮ್ಮ ಸುತ್ತ ಇದ್ದರೆ ಅವರನ್ನು, 'ಗಾಂಧಿ ಕಂಡರೆ ಕೆಂಡವಾಗುವ ನೀವು ಗಾಂಧಿ, ಜಪ ಮಾಡುವ ಮೋದಿಯನ್ನು ಇಷ್ಟಪಡುತ್ತೀರ?' ಎಂದು ಕೇಳಿ. ಅವರ ಉತ್ತರ ಮೌನವಾಗಬಹುದು. ದುರಂತವೆಂದರೆ ಗಾಂಧಿಯನ್ನು ಕೊಂದವರು ದೇಶಭಕ್ತಿಯ ಪಾಠವನ್ನು ನಮಗೆಲ್ಲಾ ಹೇಳಿಕೊಡುತ್ತಿದ್ದಾರೆ.

ಇನ್ನೊಂದು ಸೋಜಿಗದ ವಿಷಯವನ್ನು ಹೇಳಲೇಬೇಕು. ಹಿಂದೆ ಅಂಬೇಡ್ಕರರನ್ನು ಕಂಡರೆ ಕಿಡಿಕಾರುತ್ತಿದ್ದ ಆರ್.ಎಸ್.ಎಸ್ ಇಂದು ಅಂಬೇಡ್ಕರರ ಬಗ್ಗೆ ಅಭಿಮಾನ ತೋರುತ್ತಿದೆ. ಕಾರಣ ಕೇಳಿದರೆ, "ಅಂಬೇಡ್ಕರ್, ನಾನು ಮೊದಲು ಭಾರತೀಯ; ಕೊನೆಯಲ್ಲೂ ಭಾರತೀಯ ಎಂದರು. ಕಾಶ್ಮೀರದ ಸಮಸ್ಯೆಯ ಕುರಿತು ಮಾತನಾಡಿದರು.." ಹೀಗೆ ಮೊದಲಾಗಿ ಹೊಗಳುತ್ತಾರೆ. ಅದೇ ಅಂಬೇಡ್ಕರ್ ಹಿಂದುತ್ವವನ್ನು ವಿರೋಧಿಸುವುದರ ಬಗ್ಗೆ ಮಾತನಾಡುವುದಿಲ್ಲ. ಕಾರಣ ಸಮಗ್ರ ಅಂಬೇಡ್ಕರ್ ಅವರಿಗೆ ಬೇಕಾಗಿಲ್ಲ. ಅದೇ ರೀತಿ ಇಂದಿನ ದಲಿತ ಚಳುವಳಿಯ ಸಮಗ್ರ ಗಾಂಧಿಯನ್ನು ಕಾಣುತ್ತಿಲ್ಲ.

ಗಾಂಧಿ ಮೊದಲು ಹಿಂದೂ ಪರವಾದಿಯಾದರೂ ನಂತರದಲ್ಲಿ ಅಂಬೇಡ್ಕರರ ತೀಕ್ಷ್ಣ ವಿಮರ್ಶೆಯಿಂದ ದಲಿತ ಪರವಾಗುತ್ತಾ ಹೋದರು. ಹೀಗಾಗಿ ದಲಿತ ಹೋರಾಟ ಯಾರ ವಿರುದ್ಧ ಎಂಬುದನ್ನು ಕಂಡುಕೊಳ್ಳಬೇಕಾಗಿದೆ. ಲೋಹಿಯಾ, ಮಾರ್ಕ್ಸ್ ಕೂಡ ದಲಿತ ಚಳವಳಿಯಿಂದ ದೂರವಾಗುತ್ತಿದ್ದಾರೆ. ಅಂಬೇಡ್ಕರ್ ಮಹಾನ್ ದಲಿತ ಶಕ್ತಿಯಾದರೂ, ಉಳಿದ ನಾಯಕರ ಅನಿವಾರ್ಯತೆ ದಲಿತ ಚಳವಳಿಗಿದೆ. ಇಲ್ಲದಿದ್ದರೇ, ಅಂಬೇಡ್ಕರರನ್ನು ದಲಿತರಿಗಷ್ಟೇ ದಲಿತರೇ ಸೀಮಿತ ಮಾಡುವ ಅಪಾಯವಿದೆ

ಹಿರಿಯ ಚಳವಳಿಕಾರರಿಗೆ ಸಿಕ್ಕಿರುವ ದಲಿತೇತರರ ಬೆಂಬಲ ಇಂದು ಯಾವ ಪ್ರಮಾಣದಲ್ಲಿ ಸಿಗುತ್ತಿದೆ ಎಂದು ಕೇಳಿಕೊಳ್ಳಿ. ಕರ್ನಾಟಕದಲ್ಲಿ ದಲಿತ ಚಳವಳಿಯ ದಿನಗಳಲ್ಲಿ ಅಂಬೇಡ್ಕರರನ್ನು ಎಲ್ಲರಿಗೂ ಮುಟ್ಟಿಸಲು ಮಾಡಿದ ಪ್ರಯತ್ನ ಸಾಕಷ್ಟು ಯಶಸ್ಸು ಗಳಿಸಿದೆ. ಏಕೆಂದರೆ ಹಿರಿಯ ಚಳವಳಿಕಾರರಿಗೆ ಹೇಗೆ ಅಂಬೇಡ್ಕರರನ್ನು ಎಲ್ಲರೆಗೂ ಮುಟ್ಟಿಸಬೇಕೆಂಬ ಪಟ್ಟುಗಳು ತಿಳಿದಿದ್ದರು. ಮೇಲ್ಜಾತಿಗಳಿಂದ ದೂರಾಗಿ ಚಳವಳಿಯ ರೂಪಿಸಲು ಆಗುವುದಿಲ್ಲ ಎಂದು ಅರಿತ್ತಿದ್ದರು. ಅವರೊಂದಿಗೆಯೇ ಇದ್ದು ವ್ಯವಸ್ಥೆಯ ದರ್ಶನ ಮಾಡಿಕೊಟ್ಟು ಚಳವಳಿಗೆ ಜನಮನ್ನಣೆ ತಂದುಕೊಟ್ಟರು. ಪಿ.ಸಾಯಿನಾಥ್‌ರವರು ಹೇಳುವಂತೆ. "ಈಗ ನಾವು ಬಹು ದೂರ ಬಂದು ಜಾಗತೀಕರಣದೊಳಗೆ ಸಿಲುಕಿದ್ದು, ಧಾರ್ಮಿಕ ಮೂಲಭೂತವಾದ ಮತ್ತು ಬಂಡವಾಳಶಾಹಿ ಮೂಲಭೂತವಾದದ ಮೈತ್ರಿಕೂಟದ ಯುಗದಲ್ಲಿ ಬದುಕುತ್ತಿದ್ದೇವೆ. ಅವುಗಳ ಕಹಿ ಫಲವನ್ನು ಅನುಭವಿಸುತ್ತಾ ಇದ್ದೇವೆ." ವ್ಯವಸ್ಥೆ ಹೀಗಿರುವಾಗ ಇಂದು ಅಂಬೇಡ್ಕರ್ ಮತ್ತು ಗಾಂಧಿ ಜೀವಿಸುತ್ತಿದ್ದರೆ, ಇಬ್ಬರೂ ಸೈದ್ಧಾಂತಿಕ ತಡೆಗೋಡೆಗಳನ್ನು ಒಡೆದು ಒಂದಾಗುತ್ತಿದ್ದರು. ಏಕೆಂದರೆ ಭಾರತದ ಇಂದಿನ ಬೆಳವಣಿಗೆ ಮನುಷ್ಯ ವಿರೋಧಿಯಾಗುತ್ತಿದೆ.

–ಸಾಭಾರ; ಸಂವಾದ

ನೂತನ ಭಾರತದಲ್ಲಿ ಖಾದಿ

–ಸುರೇಂದ್ರ ಕೌಲಗಿ

> 'ಭೂಮಿಯ ಸಂಪನ್ಮೂಲಗಳ ವ್ಯಯ ಮತ್ತು ಮಾಲಿನ್ಯತೆಗೆ ಎಲ್ಲಕ್ಕಿಂತ ಮುಖ್ಯ ಕಾರಣ ಮನುಷ್ಯನ ಅಸ್ಮಿತೆಯಲ್ಲಿಯ ಭ್ರಷ್ಟತೆ ಮತ್ತು ಪ್ರಜ್ಞೆಯಲ್ಲಿಯ ಹಿಂಜರಿತ.'
> – ಇವಾನ ಇಲಿಚ್

ತೊಂಬತ್ತೈದು ವರ್ಷಗಳ ಹಿಂದೆ ಗಾಂಧೀಜಿ ಖಾದಿಯನ್ನು ಮೊದಲ ತೊಟ್ಟರು. ಸೇವಾಗ್ರಾಮದ ಉರಿ ಬಿಸಲಲ್ಲಿ ಆಶ್ರಮದ 'ಗಾಂಧಿಕುಟಿ'ಯಲ್ಲಿ ಕುಳಿತು ತಮ್ಮ ಬಟ್ಟೆಗಾಗಿ ನೂಲು ತಗೆಯುತ್ತಿದ್ದರು. ನೂರು ವರ್ಷಗಳ ನಂತರ ಗುಡಿಸಿಲನಲ್ಲಿದ್ದ ಖಾದಿಗೆ ಪ್ರಧಾನಿ ನರೇಂದ್ರ ಮೊದಿ ಸರ್ಕಾರದ ನಿಮ್ಮಿತ್ತ ಈಗ ಹವಾನಿಯಂತ್ರಿತ ಜೆಟ್ ವಿಮಾನಗಳಲ್ಲಿ ಸ್ಥಾನಪಡೆದು ದೇಶ–ವಿದೇಶಗಳಿಗೆ ಹೋಗುವಂಥ ಕಾಲ ಬಂದಿದೆ. ಇನ್ನು ಮುಂದೆ ರಾಷ್ಟ್ರಪತಿ ಮತ್ತು ಪ್ರಧಾನ ಮಂತ್ರಿ ಪ್ರಯಾಣಿಸುವ ವಿಮಾನಗಳಲ್ಲಿಯ ಸಿಬ್ಬಂದಿ ಖಾದಿ ಧರೀಸಬೇಕೆಂಬ ಆದೇಶ ಹೊರಬೀಳಲಿದೆ. ಕೇಂದ್ರ ಸರ್ಕಾರದ ನೌಕರರು ಪ್ರತಿ ಶುಕ್ರವಾರ ಖಾದಿಧಾರಿಗಳಾಗಿ ಕೆಲಸಕ್ಕೆ ಬರೆಬೇಕೆಂಬ ಆದೇಶವೂ ಹೊರಬೀಳಲಿದೆ. ಖಾದಿಯನ್ನು ಜನಪ್ರಿಯಗೊಳಿಸಲು ಇದೊಂದು ಮಾರ್ಗವಾಗಿದ್ದರೂ, ಅದರ ಜೊತೆಗೆ ಹಲವಾರು ಪ್ರಶ್ನೆಗಳು ಮುನ್ನಲೆಗೆ ಬರುತ್ತವೆ ಸರ್ಕಾರದ ಈ ಕ್ರಮ ಖಾದಿಪ್ರೇಮಿಗಳನ್ನು, ಕೈಮಗ್ಗದ ಕ್ಷೇತ್ರದಲ್ಲಿ ದುಡಿಯುವವರನ್ನು ಮತ್ತು ಪರಿಸರವಾದಿಗಳನ್ನು ಹಾಗೂ ಸುಸ್ಥಿರ ಬದುಕಿನ ಪ್ರತಿಪಾದಕರನ್ನು ಸಂತೋಷಗಳಿಸುವ ಉಪಾಯವೇ ಅಥವಾ ಕೇಂದ್ರ ಸರ್ಕಾರದ ಕೈಗಾರಿಕಾ ನೀತಿಯಲ್ಲಿಯ ಬದಲಾವಣೆಯ ದ್ಯೋತಕವೆ ಎಂಬುದು ನಿಚ್ಚಳವಾಗಿಲ್ಲ. ಕೇಂದ್ರ ಸರ್ಕಾರದ 'ಮೇಕ್–ಇನ್–ಇಂಡಿಯಾ' ಘೋಷಣೆಯ ಪ್ರಕಾರ ಜಗತ್ತಿನ ಶ್ರೀಮಂತ ರಾಷ್ಟ್ರಗಳಲ್ಲಿಯ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳು ಭಾರತಕ್ಕೆ ಬರುತ್ತಿವೆ ಮತ್ತು ಇಲ್ಲಿ ತಮ್ಮ ಉದ್ಯಮಗಳನ್ನು ಪ್ರಾರಂಭಿಸುತ್ತಿವೆ. ಮಿಲಿಯಗಟ್ಟಲೇ ಹಣ ಭಾರತಕ್ಕೆ ಹರಿದುಬರುತ್ತಿದೆ. ವಿದೇಶಗಳಿಂದ ಬರುತ್ತಿರುವ ಬೃಹತ್ ಕೈಗಾರಿಕೆಗಳ ಮುಂದೆ ಕೈಮಗ್ಗ ಉದ್ಯಮ, ಮುಖ್ಯವಾಗಿ ಖಾದಿ ಉದ್ಯಮ ನಿಲ್ಲಬಹುದೇ ಎಂಬ ಪ್ರಶ್ನೆ ಮತ್ತು ಸರ್ಕಾರದ ಆದೇಶದ ಮೇರೆಗೆ ಖಾದಿ ಧರಿಸುವವರು ಅದರ ಹಿಂದಿರುವ ಮೂಲೋದ್ದೇಶಗಳನ್ನು ತಿಳಿದಿರುತ್ತಾರೆಯೇ

ಎಂಬ ಪ್ರಶ್ನೆ ಕಾಡುತ್ತದೆ. ಖಾದಿ ವಿಶಿಷ್ಟ ಪ್ರಕಾರದ ಜೀವನ ಪದ್ಧತಿಯ ಸಂಕೇತವಾಗಿರುವುದರಿಂದ ಅದನ್ನು ಧರಿಸುವವರು ಆ ವಿಶಿಷ್ಟ ಜೀವನ ಪದ್ಧತಿಯನ್ನು ಅಳವಡಿಸಿಕೊಳ್ಳುತ್ತಾರೆಯೇ ಎಂಬ ಪ್ರಶ್ನೆ ಕೂಡ ಇದೆ. ಖಾದಿಯು ದೇಶವಾಸಿಗಳ ಸಮವಸ್ತ್ರವಾಗಬೇಕೆಂದು ಗಾಂಧೀಜಿ ಬಯಸಿದ್ದರು. ಖಾದಿ ಧರಿಸುವ ಮೂಲಕ ಜನರು ಅದರ ಹಿಂದಿರುವ ವಿಚಾರಗಳನ್ನು ತಿಳಿದಿರಬೇಕೆಂದೂ ಬಯಸಿದ್ದರು. ಅವರ ಕಾಲದಲ್ಲಿ ಕೂಡ ಎರಡು ಪ್ರಕಾರದ ಜನರಿದ್ದರು, ಸ್ವ ಇಚ್ಛೆಯಿಂದ ಸದಾ ಖಾದಿಧಾರಿಗಳಾದವರು ಒಂದು ಪ್ರಕಾರವಾದರೆ, ಅನುಕೂಲವಾದಾಗ ಮಾತ್ರ ಆಂಶಿಕವಾಗಿ ಖಾದಿ ಧರಿಸುವ ಇನ್ನೊಂದು ಪ್ರಕಾರದವರು. ಆಗ ಭಾರತದಲ್ಲಿದ್ದ ಬಡತನ, ನಿರುದ್ಯೋಗ, ಮುಂತಾದವಗಳನ್ನು ಗಮನದಲ್ಲಿರಿಸಿಕೊಂಡು ಗಾಂಧೀಜಿ ಖಾದಿ ಸರ್ವತ್ರವಾಗಿರಬೇಕು ಮತ್ತು ಜನರು ಹೆಚ್ಚು ಹೆಚ್ಚಾಗಿ ನೂಲು ತೆಗೆಯಬೇಕೆಂದು ಹೇಳುತ್ತಿದ್ದರು. ಜೊತೆಗೆ ದೇಶವನ್ನು ವಿದೇಶಿ ಬಟ್ಟೆಗಳಿಂದ ಮುಕ್ತಗೊಳಿಸಿ ಅದರ ಸ್ಥಾನದಲ್ಲಿ ಸ್ವದೇಶಿ ಬಟ್ಟೆಯ ಉತ್ಪನ್ನವಾಗಿ ದೇಶವು ಸ್ವಾಂತಂತ್ರ್ಯದ ಕಡೆಗೆ ಮುನ್ನಡೆಯ ಬೇಕೆಂದು ಯೋಚಿಸುತ್ತಿದ್ದರು. ಆಗಿನ ಕಾಲದಲ್ಲಿ ರಾಷ್ಟ್ರೀಯ ಸಂಸ್ಥೆಯಾಗಿದ್ದ ಕಾಂಗ್ರೆಸ್, ಖಾದಿಯನ್ನು ತನ್ನ ಸ್ವಾಂತಂತ್ರ್ಯ ಚಳುವಳಿಯ ಪ್ರಮುಖ ಕಾರ್ಯಕ್ರಮವನ್ನಾಗಿಸಿಕೊಂಡಿತ್ತು, ಕಾಂಗ್ರೇಸ್ ಸಂಘಟನೆಯ ಸದಸ್ಯರಾಗಬಯಸುವವರು ಸ್ವತಃ ನೂತ ಖಾದಿ ದಾರವನ್ನು ಕೊಡಬೇಕೆಂಬ ನಿಯಮಮಾಡಿತ್ತು. ಅಂದರೆ, ಖಾದಿ ಧರಿಸುವವರು ನೂಲಬೇಕು ಮತ್ತು ನೂಲುವವರು ಖಾದಿ ಧರಿಸಬೇಕು. ಹೀಗೆ ಮಾಡುವುದರಿಂದ ಖಾದಿ ಉದ್ಯಮಕ್ಕೆ ಬಲಬರುತ್ತದೆಂದು ಗಾಂಧೀಜಿಯವರ ನಂಬಿಕೆಯಾಗಿತ್ತು. ಅಲ್ಲದೆ ತನ್ಮೂಲಕ ದೇಶವಾಸಿಗಳ ಜೀವನದಲ್ಲಿ ಸತ್ಯ ಮತ್ತು ಅಹಿಂಸೆಯ ಮೌಲ್ಯಗಳ ಸ್ಥಾಪನೆಯಾಗುವದೆಂದೂ ಅವರ ನಿರೀಕ್ಷೆಯಾಗಿತ್ತು. ಆದ್ದರಿಂದಲೇ ಜಲಿಯನವಾಲಾಬಾಗ ಹತ್ಯಾಕಾಂಡದ ವಿರುದ್ಧ, ಕಲಾಫತ್‌ರವರಿಗೆ ಬ್ರಿಟಿಷರು ಮಾಡಿದ ಅನ್ಯಾಯದ ವಿರುದ್ಧ, ರೌಲೆಟ್ ಮಸೂದೆಯ ವಿರುದ್ಧ ಅಸಹಕಾರ ಚಳುವಳಿಯನ್ನು ಗಾಂಧೀಜಿ ಹೂಡಿದುದರ ಹಿಂದೆ ಜನರು ಸತ್ಯ ಮತ್ತು ಅಹಿಂಸೆಯಲ್ಲಿ ತರಬೇತಿ ಹೊಂದಬೇಕೆಂಬ ಉದ್ದೇಶವೇ ಮುಖ್ಯವಾಗಿತ್ತು. ಈ ಚಳುವಳಿಯು ಉತ್ತುಂಗ ಸ್ಥಿತಿಯಲ್ಲಿದ್ದಾಗ ನಡೆದ ಹಿಂಸಾಚಾರದಿಂದಾಗಿ ಗಾಂಧೀಜಿಯವರು "ತಾವು ಹಿಮಾಲಯದಂಥ" ತಪ್ಪನ್ನು ಮಡಿರುವುದಾಗಿ ಹೇಳಿ ಚಳುವಳಿಯನ್ನು ನಿಲ್ಲಿಸಿದರು. ಖಾದಿ ಮೂಲಕ ಸತ್ಯ ಮತ್ತು ಅಹಿಂಸೆಯ ಪ್ರಚಾರಕ್ಕಾಗಿ ಗಾಂಧೀಜಿ ಮೂವತ್ತು ವರ್ಷಗಳ ಕಾಲ ಶ್ರಮಪಟ್ಟರು. ದೇಶಾದ್ಯಂತ

ಸುತ್ತಾಡಿದರು. ಖಾದಿಯು ಸ್ವಾತಂತ್ರ್ಯ ಆಂದೋಲನದ ಸಿಪಾಯಿಗಳ ಹಾಗೂ ದೇಶಭಿಮಾನದ ಸಂಕೇತವಾಗಿ ಹೊರಹೊಮ್ಮಿತು. "ಈಗ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ಆದರೆ ಬದಲಾದ ಪರಿಸ್ಥಿತಿಯಲ್ಲಿಯೂ ಖಾದಿಯ ಹಿಂದಿರುವ ವಿಚಾರಗಳ ಮತ್ತು ಆದರ್ಶಗಳ ಪ್ರಸ್ತುತತೆ ಅಧಿಕವಾಗಿದೆ. ನೂತನ ಭಾರತದಲ್ಲಿ ಇನ್ನೊಮ್ಮೆ ಖಾದಿ ಚಳುವಳಿ ನಡೆಯಬೇಕಾದ ತೀವ್ರ ಅಗತ್ಯತೆ ಉಂಟಾಗಿದೆಯೆಂದೆ ಅನಿಸುತ್ತದೆ. ಸರ್ಕಾರದ ಇಂದಿನ ಕೈಗಾರಿಕಾ ಮತ್ತು ಆರ್ಥಿಕ ನೀತಿಗಳು ಭಾರತವನ್ನು ಇನ್ನೊಂದು ಪಾಶ್ಚಿಮಾತ್ಯ ರೀತಿಯ ದೇಶವನ್ನಾಗಿ ಪರಿವರ್ತಿಸಲು ಹೊರಟಿದೆ. ಪಾಶ್ಚಿಮಾತ್ಯ ರೀತಿಯ ಕೈಗಾರಿಕೆ ಮತ್ತು ಆರ್ಥಿಕ ನೀತಿಗಳು ದೇಶದ ಸಂಸ್ಕೃತಿ, ಹವಾಗುಣ ಮತ್ತು ಜನಸಂಖ್ಯೆಯ ದೃಷ್ಟಿಯಿಂದ ಭಾರತಕ್ಕೆ ಹಿತಕಾರಿಯಲ್ಲ ಎಂಬುದನ್ನು ಬೇರೆಹೇಳಬೇಕಿಲ್ಲ. ಆದ್ದರಿಂದ ಈಗ ಕೇಂದ್ರ ಸರ್ಕಾರವು ಖಾದಿ ಬಗ್ಗೆ ತೋರುತ್ತಿರುವ ಪ್ರೀತಿ ನೈಜವಾದುದೇ ಅಥವಾ ಕೇವಲ ರಾಜಕೀಯ ದೃಷ್ಟಿ ಇಟ್ಟುಕೊಂಡದ್ದಾಗಿದೇಯೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ." ಖಾದಿಯ ಮೂಲ ಪುರುಷರಾದ ಗಾಂಧಿ ತಮ್ಮ 'ಹಿಂದ ಸ್ವರಾಜ್' ಪುಸ್ತಕದ ಮೂಲಕ ಪಾಶ್ಚಿಮಾತ್ಯ ರೀತಿ-ನೀತಿ, ಶಿಕ್ಷಣ, ಕೈಗಾರಿಕೆ, ಸಂಸ್ಕೃತಿ, ಯಂತ್ರಗಾರಿಕೆ ಮುಂತಾದವುಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ಖಚಿತವಾದ ಮಾತುಗಳಲ್ಲಿ ದಾಖಲಿಸಿದ್ದಾರೆ. ಒಂದುವೇಳೆ ಕೇಂದ್ರ ಸರ್ಕಾರದ ಮನಸ್ಸಿನಲ್ಲಿ ಖಾದಿ ಬಗೆಗಿನ ಪ್ರೀತಿ ಸತ್ಯವಾದುದಾಗಿದ್ದರೆ ಅದು ಈಗ ಅನುಸರಿಸುತ್ತಿರುವ ಎಲ್ಲ ಬಗೆಯ ನೀತಿಗಳನ್ನು ಪುನರ್‌ವಿಮರ್ಶಿಸಬೇಕಾಗುವುದು ಹಾಗೂ ಪುನರ್‌ರಚಿಸ ಬೇಕಾಗುವದು. ಇದನ್ನು ಇಂದಿನ ಸರ್ಕಾರ ಮಾಡಲು ಸಿದ್ಧವಿದೇಯೇ? ಗಾಂಧಿ ಮಾರ್ಗದಲ್ಲಿಯೇ ಹೋಗುವದು ಕ್ಷೇಮಕರ ಎಂಬ ಅಭಿಪ್ರಾಯ ಜನ ಸಾಮಾನ್ಯರಲ್ಲಿದೆ. ಈಗ ಜಾಗತಿಕವಾಗಿ ಉಂಟಾಗಿರುವ ಹವಾಮಾನದ ಬದಲಾವಣೆಗೆ, ಪರಿಸರ ನಾಶಕ್ಕೆ, ತಾಪಮಾನದಲ್ಲಿಯ ಹೆಚ್ಚಳಕ್ಕೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿಯ ಅಶಾಂತಿಗೆ ಗಾಂಧೀಜಿ ಪ್ರತಿಪಾದಿಸಿದ್ದ ಸಿದ್ಧಾಂತಗಳಿಗೆ ತಿಲಾಂಜಲಿ ಕೊಟ್ಟದೇ ಕಾರಣವೆಂಬ ಅಭಿಪ್ರಾಯ ಜನರಲ್ಲಿದೆ. ದೇಶದಲ್ಲಿರವ ಸಮಾಜವಾದಿಗಳು, ಸಾಮ್ಯವಾದಿಗಳು, ಅಂಬೇಡ್ಕರವಾದಿಗಳು, ಬುದ್ಧಿಜೀವಿಗಳು, ಸರ್ವೋದಯವಾದಿಗಳು, ಸಕಲಧರ್ಮಗಳ ಅನುಯಾಯಿಗಳು ಈ ಮುಂತಾದ ಎಲ್ಲ ವರ್ಗದ ಜನ ಗಾಂಧಿವಿಚಾರದ ಪರವಾಗಿದ್ದಾರೆ. ದೇಶವನ್ನು ಗಾಂಧಿ ಮಾರ್ಗದಲ್ಲಿ ಕೊಂಡ್ಯೊಯಲು ಅವರು ಸಮ್ಮತಿಸುತ್ತಾರೆ. ವಿರೋಧವು ಬಲಪಂಥೀಯ ಜನರಿಂದ ಮತ್ತು ಸಂಘಟನೆಗಳಿಂದ ಮಾತ್ರ ಬರಬಹುದು. ಆದ್ದರಿಂದ ಖಾದಿ ಬಗೆಗಿನ ಸರ್ಕಾರದ ಪ್ರೀತಿ ಖಾದಿ ಕೈಗಾರಿಕೆಯ ಅಭಿವೃದ್ಧಿಗೆ

ದಾರಿಮಾಡಿಕೊಡುವಂತಾಗಬೇಕು. ವಿಮಾನಗಳಲ್ಲಿ, ರೈಲುಗಳಲ್ಲಿ, ಕಛೇರಿಗಳಲ್ಲಿ ಖಾದಿಯನ್ನು ಉಪಯೋಗಿಸುವಂತೆ ಮಾತ್ರ ಮಾಡುವುದರಿಂದ ಖಾದಿಯ ಉದ್ಯಮದ ಬೆಳವಣಿಗೆಗೆ ಅಷ್ಟೊಂದು ಸಹಕಾರಿಯಾಗಲಾರದು. ಮುಖ್ಯವಾಗಿ ಆಗಬೇಕಾದುದು ಸರ್ಕಾರ ಈಗ ಅನುಸರಿಸುತ್ತಿರುವ ಜವಳಿ ನೀತಿಯಲ್ಲಿಯೇ ಆಮೂಲಾಗ್ರವಾದ ಪರಿವರ್ತನೆ. ಈಗ ಖಾದಿಗೆ ಪೈಪೋಟಿ ನೀಡುತ್ತಿರುವ ವಿದ್ಯುತ್ ಮಗ್ಗಗಳು, ಮಿಲ್ಲುಗಳು ಮಾಡುವ ಉತ್ಪಾದನೆಗಳಿಗೆ ಖಾದಿಯ ರಕ್ಷಣೆಗಾಗಿ ಲಕ್ಷ್ಮಣರೇಖೆ ಹಾಕಬೇಕಿದೆ. ಸಿಬ್ಬಂದಿವರ್ಗಕ್ಕೆ ಎಷ್ಟು ಮೀಟರ್ ಹಾಗೂ ಯಾವ ವಿನ್ಯಾಸದ ಖಾದಿ ಬಟ್ಟೆಬೇಕು ಮತ್ತು ಅಷ್ಟು ಪ್ರಮಾಣದ ಮತ್ತು ವಿನ್ಯಾಸದ ಖಾದಿ ಉತ್ಪನ್ನವಾಗುತ್ತಿದೆಯೇ ಎಂದು ತಿಳಿಯಬೇಕಾದುದು ಮುಖ್ಯ. ಇಲ್ಲವಾದರೆ ದುಪ್ಲಿಕೇಟ್ ಖಾದಿಯ ಉತ್ಪಾದನೆಗೂ, ಭಷ್ಟಾಚಾರಕ್ಕೂ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇನ್ನೊಂದು ಮುಖ್ಯ ಸಂಗತಿಯೇನೆಂದರೆ ಕುಲಾಂತರಿ ಹತ್ತಿಯನ್ನು ಬೆಳೆದು ರೈತರು ಕೈಸುಟ್ಟುಕೊಂಡಿದ್ದಾರೆ. ಹತ್ತಿಯ ಬೆಳೆ ನಷ್ಟವಾಗಿ ಅದರ ಬೆಲೆ ಗಗನಕ್ಕೆ ಏರಿದೆ. ಅದರಿಂದಾಗಿ ಖಾದಿ ಬಟ್ಟೆ ದುಬಾರಿಯಾಗಿ ಪರಿಣಮಿಸುತ್ತಿದೆ. ಸರ್ಕಾರಕ್ಕೆ ಖಾದಿ ಬಗ್ಗೆ ನಿಜವಾದ ಪ್ರೀತಿ ಇದ್ದರೆ ಹತ್ತಿಯ ಬೆಲೆಯನ್ನು ತಗ್ಗಿಸಲು ಕೂಡಲೆ ಕ್ರಮಕೈಗೊಳ್ಳಬೇಕು. ಅಲ್ಲದೆ, ಕೇಂದ್ರ ಸರ್ಕಾರದ ಅಧೀನದಲ್ಲಿರುವ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ಮತ್ತು ಅದರ ಅಂಗ ಸಂಸ್ಥೆಗಳಾದ ರಾಜ್ಯ ಖಾದಿಗ್ರಾಮೋದ್ಯೋಗ ಮಂಡಳಿಗಳಲ್ಲಿಯ ಭ್ರಷ್ಟಾಚಾರವನ್ನು ಪೂರ್ಣವಾಗಿ ನಿರ್ಮೂಲನೆ ಮಾಡಬೇಕು. ಆಯೋಗ ಮತ್ತು ರಾಜ್ಯ ಮಂಡಳಿಗಳ ಅಧ್ಯಕ್ಷರ ಆಯ್ಕೆ ರಾಜಕೀಯವಾಗಿರದೇ ಖಾದಿ ಬಗ್ಗೆ ಆತ್ಮಪೂರ್ವಕವಾಗಿ ಶ್ರದ್ಧೆ ಉಳ್ಳವರ ಆಯ್ಕೆಯಾಗಬೇಕು. ಈ ಕ್ರಮ ಅತ್ಯಂತ್ಯ ಮುಖ್ಯವಾಗುತ್ತದೆ. ಏಕೆಂದರೆ ಭಾರತದ ಆತ್ಯಾಂತಿಕ ಪವಿತ್ರ ಭಾವನೆಗಳ ಮೇಲೆ ಮತ್ತು ಸಂಸ್ಕೃತಿ ಮೇಲೆ ವಿದೇಶಗಳಿಂದ ಸತತವಾಗಿ ಪ್ರಹಾರವಾಗುತ್ತಿರುವಾಗ ಆ ಪ್ರಹಾರವನ್ನು ದ್ವೇಷಿಸಬೇಡಿರೆಂದು ಹೇಳುವುದು ಭಾರತವನ್ನು ಅಣಕಿಸಿದಂತೆ, ಇದು ಗಾಂಧೀಜಿಯವರ ಮನಸ್ಸಿನಲ್ಲಿದ್ದ ಭಾವನೆ. ಈ ನಿಟ್ಟಿನಲ್ಲಿ ಖಾದಿಯನ್ನು ಬೆಳೆಸಿ ಜನಸಾಮಾನ್ಯರೆಲ್ಲರಲ್ಲಿ ಖಾದಿಯನ್ನು ಜನಪ್ರಿಯಗೊಳಿಸುವ ಕೆಲಸವನ್ನು ಸರ್ಕಾರ ಮಾಡುವುದಾದರೆ ಜೆಟ್ ವಿಮಾನಗಳಲ್ಲಿ, ಕಛೇರಿಗಳಲ್ಲಿಯ ಸರ್ಕಾರದ ಖಾದಿ ಪ್ರಚಾರದ ಕೆಲಸಕ್ಕೆ ಬೆಲೆಬರುತ್ತದೆ.

ಖಾದಿ ಕೇವಲ ಬಟ್ಟೆಯಲ್ಲ, ಅದೊಂದು ಅಹಿಂಸಕ, ವಿಕೇಂದ್ರಿತ, ಆರ್ಥಿಕ, ಸಮಾನತೆಯ ಮತ್ತು ಪರಿಸರ ಉಳಿಸುವ ಉದ್ಯಮವಾಗಿದೆ. ಅಲ್ಲದೆ

ದೇಶದಲ್ಲಿರುವ ಬಹುತ್ವವನ್ನೂ ಮತ್ತು ಸಹನಶೀಲತೆಯನ್ನೂ ಸಾಕಾರಗೊಳಿಸುವ ಪ್ರಬಲ ಸಾಧನವೂ ಆಗಿದೆ. ಆದರೆ ಸರ್ಕಾರದ ಗಮನ ಈ ಮುಖ್ಯ ಅಂಶದ ಕಡೆಗೆ ಬರದೆ ಇರುವುದು ವಿಷಾದನೀಯ. ಮೇಕ್-ಇನ್-ಇಂಡಿಯಾ ಕಾರ್ಯಕ್ರಮ ಬಹುಮಟ್ಟಿಗೆ ದೇಶಿಯ ಉದ್ಯಮಗಳನ್ನು ಸೃಷ್ಟಿಸುವ ಬದಲಾಗಿ ರಕ್ಷಣಾ ಇಲಾಖೆಗೆ ಬೇಕಾದ ಶಸ್ತ್ರಾಸ್ತ್ರ ಉತ್ಪಾದಿಸುವ ನಿಟ್ಟಿನಲ್ಲಿಯೇ ಕೆಲಸ ಮಾಡುತ್ತಿದೆ. ಇತ್ತೀಚೆಗೆ ಗೋವಾದಲ್ಲಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಪ್ರದರ್ಶನ ನಡೆಯಿತು. ದೇಶ-ವಿದೇಶಗಳ ಕಂಪನಿಗಳು ಅದರಲ್ಲಿ ಭಾಗವಹಿಸಿದ್ದವು. ಭಾರತದಲ್ಲಿ ತಯಾರಾದ ಶಸ್ತ್ರಗಳು ಕೂಡಾ ಪ್ರದರ್ಶಿಸಲ್ಪಟ್ಟಿದ್ದವು. ಸರ್ಕಾರ ಒಂದು ಕಡೆ ಶಸ್ತ್ರಾಸ್ತ್ರಗಳ ಕಡೆಗೂ ಪ್ರೋತ್ಸಾಹ ಕೊಡುತ್ತ ಇನ್ನೊಂದು ಕಡೆ ಅಹಿಂಸೆಯ ಪ್ರತೀಕವಾದ ಖಾದಿಯ ಪ್ರೀತಿಯ ಮಾತುಗಳನ್ನೂ ಹೇಳುತ್ತಿರುವುದು ಸರ್ಕಾರದ ನೀತಿಯ ಮೇಲೆ ನಂಬಿಕೆವುಂಟಾಗುವುದಿಲ್ಲ.

ಸರ್ಕಾರ ತೋರಿಸುತ್ತಿರುವ ಖಾದಿ ಪ್ರೀತಿಯನ್ನು ಗಮನಿಸುತ್ತಿದ್ದಾಗಲೇ ಕೆಲವು ವೈರುಧ್ಯಗಳೂ ಕಣ್ಣಿಗೆ ರಾಚುತ್ತವೆ. ಮೊದಲನೆಯದು, ಗಾಂಧೀಯ ವಿಚಾರಗಳನ್ನೂ ಡಾ॥ಅಂಬೆಡ್ಕರರ ವಿಚಾರಗಳನ್ನೂ ತನ್ನದನ್ನಾಗಿ ಮಾಡಿಕೊಳ್ಳುತ್ತಿರುವ ಸರ್ಕಾರ ಆ ಮಹನಿಯರು ಪರಸ್ಪರ ವಿರೋಧಿಗಳಲ್ಲ, ಅವರಿಬ್ಬರೂ ಒಂದೇ ಉದ್ಧೇಶಕ್ಕಾಗಿ ಹೋರಾಡಿದಂಥವರು ಎಂಬುದನ್ನು ಬಿಂಬಿಸುವ ಪ್ರಯತ್ನಮಾಡದೆ ಅವರಿಬ್ಬರೂ ಪ್ರತ್ಯೇಕ ಧ್ರುವಗಳೆಂದು ಬಿಂಬಿಸುವುದು; ಎರಡನೇಯ ವೈರುಧ್ಯವೆಂದರೆ ಖಾದಿಯ ಜನಕ ಗಾಂಧಿಯನ್ನು ಹತ್ಯಮಾಡಿದ ವ್ಯಕ್ತಿಯ ದೇವಸ್ಥಾನದ ನಿರ್ಮಾಣವನ್ನು ತಡೆಯುವ ಧೈರ್ಯವನ್ನು ತೋರಿಸುತ್ತಿಲ್ಲವೆಂಬುದು. ಇಂಥ ವೈರುಧ್ಯಗಳ ಕಾರಣದಿಂದಾಗಿ ಸರ್ಕಾರದ ಖಾದಿ ಪ್ರೀತಿ ಅನುಮಾನಕ್ಕೆ ಆಸ್ಪದ ಕೊಡುತ್ತದೆ. ಇಂಥ ವೈರುಧ್ಯಗಳನ್ನು ದಾಟಿ ದೇಶಾದ್ಯಂತ ಖಾದಿ ಉದ್ಯಮ ಗಟ್ಟಿಯಾಗಿ ನಿಲ್ಲುವಂತೆ ಪರಿಣಾಮಕಾರಿ ಕ್ರಮವನ್ನು ಕೈಗೊಂಡಾಗಲೇ ಸರ್ಕಾರದ ಖಾದಿ ಪ್ರೀತಿಯನ್ನು ನಂಬಬಹುದು.

ನಿಮ್ಮ ಒಪ್ಪಿಗೆ ಇಲ್ಲದೆ ಯಾರೂ ನಿಮ್ಮನ್ನು ಕೀಳಾಗಿ ಭಾವಿಸಲು ಸಾಧ್ಯವಿಲ್ಲ. ವಿರೋಧಕ್ಕೆ ಹೆದರಬೇಡಿ. ವಿರುದ್ಧ ದಿಕ್ಕಿನ ಗಾಳಿಯನ್ನವಲಂಭಿಸಿಯೇ ಗಾಳಿಪಟ ಮೇಲೆ ಹಾರುತ್ತದೆಂಬುದನ್ನು ನೆನಪಿಸಿಕೊಳ್ಳಿ.

ಮಹಾತ್ಮಾ ಗಾಂಧಿ ಚಿತಾಭಸ್ಮ ವಿಸರ್ಜನೆಯ ದಿನ- ಒಂದು ನೆನಪು

– ಚಂದ್ರಬಾಲ್ ತ್ರಿಪಾಠಿ

೧೯೪೮ ಫೆಬ್ರವರಿ ೧೨ರಂದು ಅಲಹಾಬಾದಿನ ಸಂಗಮದಲ್ಲಿ ಮಹಾತ್ಮ ಗಾಂಧಿಯವರ ಅಸ್ತಿ ವಿಸರ್ಜನೆ ನೆರವೇರಿತು. ನಾವು ಬರಿಗಾಲಿನಲ್ಲಿ ಅಲಹಾಬಾದ್ ಜಂಕ್ಷನ್‌ನಿಂದ ಸಂಗಮದವರೆಗೆ ನಡೆದುಕೊಂಡು ಹೋದೆವು. ಸಂಗಮವು ಗಂಗಾ, ಯಮುನಾ, ಮತ್ತು ಅಗೋಚರ ಸರಸ್ವತಿ ನದಿಗಳ ಸಂಗಮ ಸ್ಥಳ. ನನಗೆ ಗೊತ್ತಿರುವಂತೆ ಆ ದೂರ ಐದು ಮೈಲಿಗಳಷ್ಟು. ನಾನು ಆಗ ೧೭ ವರ್ಷ ಮೂರುತಿಂಗಳಿನವನಾಗಿದ್ದರೂ ಲಕ್ಷಾವಧಿ ಜನರಂತೆ ನಾವೂ ಕೂಡ ನಮ್ಮ ತಂದೆ (ಬಾಪೂವನ್ನು) ಕಳೆದುಕೊಂಡಿದ್ದೇವೆ ಎನಿಸಿತು. ಹಿಂಧು ಸಂಪ್ರದಾಯದಂತೆ ೧೩ದಿನಗಳ ವರೆಗೆ ಸಂತಾಪವನ್ನು ಆಚರಿಸಿದೆ. ಆಗ ನಾನು ಚಪ್ಪಲಿ ಧರಿಸಲಿಲ್ಲ ಮತ್ತು ಕ್ಷೌರ ಮಾಡಿಸಿಕೊಳ್ಳಲಿಲ್ಲ. ನೆಲದ ಮೇಲೆ ಮಲಗಿಕೊಳ್ಳುತ್ತಿದೆ. ಬಹಳ ಸರಳ ಊಟಮಾಡುತ್ತಿದ್ದೆ. ಇತ್ಯಾದಿಯಾಗಿ ನಾನು ಶೋಕವನ್ನು ಆಚರಿಸಿದೆ. ಆಗ ಅಲಹಾಬಾದಿನ ಕಾಲೇಜ್ ಒಂದರಲ್ಲಿ ಎರಡನೇವರ್ಷದ ವಿಜ್ಞಾನ ಓದುತ್ತಿದ್ದೆ. ಗಾಂಧೀಜಿಯವರ ಸಾವಿನ ಬಗ್ಗೆ ಶೋಕ ಆಚರಿಸಿದ ಕೆಲವೇ ವಿದ್ಯಾರ್ಥಿಗಳಲ್ಲಿ ನಾನು ಒಬ್ಬನಾಗಿದ್ದೆ. ನನ್ನ ತಾಯಿ ದುರ್ಗಾವತಿ ತ್ರಿಪಾಠಿ ಓರ್ವ ಕಟ್ಟಾ ರಾಷ್ಟ್ರವಾದಿಯಾಗಿದ್ದರು. ಅವರಿಗೆ ಬಾಪು ಮತ್ತು ನೆಹರುರವರ ಬಗ್ಗೆ ಅತ್ಯಂತ ಗೌರವವಿತ್ತು. ಅವರು ಪ್ರತಿ ಶುಕ್ರವಾರ ರಾತ್ರಿ ಊಟಮಾಡವುದನ್ನು ನಿಲ್ಲಿಸಿದರು. ಈ ನಿಯಮವನ್ನು ಅವರು ಸಾಯುವವರೆಗೂ ಅಂದರೆ ೨೨ ವರ್ಷಗಳ ಕಾಲ ಆಚರಿಸಿದರು.

ಆ ದಿವಸ ಬಾಪೂರವರ ಅಸ್ತಿಯನ್ನು ದೇಶದ ಎಲ್ಲಡೆಗೆ, ಎಲ್ಲ ತೀರ್ಥಸ್ನಾನಗಳಿಗೆ ವಿಸರ್ಜನೆಗಾಗಿ ಕಳುಹಿಸಲಾಯಿತು. ನನಗೆ ನೆನಪಿರುವಂತೆ ಚಾಂದಿನಿ ಚೌಕ್‌ದಲ್ಲಿ ವಾಸಿಸುತ್ತಿದ್ದ ಬ್ರಜ್‌ಕೃಷ್ಣ ಚಾಂದಿವಾಲರಿಗೆ ಟಿಬೇಟ್‌ನಲ್ಲಿರುವ ಕೈಲಾಸ್ ಮಾನಸಸರೋವರದಲ್ಲಿ ಗಾಂಧೀಜಿಯವರ ಅಸ್ತಿವಿಸರ್ಜನೆಯ ಜವಾಬ್ಧಾರಿಯನ್ನು ಕೊಡಲಾಗಿತ್ತು.

ಬಾಪೂವಿನ ಅಸ್ತಿಯ ಪಾತ್ರೆಯನ್ನು ತುಪಾಕಿಗಳಿರುವ ಮಿಲಿಟರಿ ವಾಹನದ ಮೇಲೆ ಇರಿಸಲಾಗಿತ್ತು. ಅದರ ಎದುರಿಗೆ ಕುಳಿತಿದ್ದ ವ್ಯಕ್ತಿ ಸರದಾರ್ ವಲ್ಲಭಾಯಿ ಪಟೇಲ್, ಇನ್ನೋರ್ವ ಪ್ರತಿಷ್ಟಿತ ವ್ಯಕ್ತಿಯೆಂದರೆ ಬಾಪೂವಿನ ಮಗ ರಾಮ್‌ದಾಸ್

ಗಾಂಧಿ, ವಿಧವೆಯಾಗಿದ್ದ ಅವರ ಹೆಂಡತಿಯನ್ನು ನಾನು ೧೯೮೮ರಲ್ಲಿ ಬೇಟಿಮಾಡಿದ್ದೆ. ಮಹಾನ್ ನಾಯಕರಾಗಿದ್ದ ಜವಹರಲಾಲ್ ನೆಹರು, ರಾಜೇಂದ್ರ ಪ್ರಸಾದ್ ಮತ್ತು ಅಬುಲ್ ಕಲಾಮ್ ಅಜಾದ್ ಮುಂತಾದವರು ಆ ವಾಹನದ ಮೇಲೆ ನಿಂತಿದ್ದರು. ಸಂಗಮದಲ್ಲಿ ಬಾಪೂಗೆ ನಮಿಸಿದ ಜನಸಮೂಹದಲ್ಲಿ ಕುಂಭಕ್ಕೆ ಬಂದಿದ್ದ ಯಾತ್ರಾರ್ಥಿಗಳು ಸೇರಿ ಸುಮಾರು ಮುವ್ವತ್ತೈದು ಲಕ್ಷ ಜನರು ಸೇರಿದ್ದಾರೆಂದು ಆಲ್ ಇಂಡಿಯಾ ರೇಡಿಯೋ ಘೋಷಿಸಿತು. ಆ ದಿನದ ವೀಕ್ಷಕ ವಿವರಣೆಯನ್ನು ಅದ್ಭುತವಾಗಿ ಮಾಡಿದ ಶಿವಕುಮಾರ್ ತ್ರಿಪಾಠಿಯವರನ್ನು ಆನಂತರ ಭೇಟಿಮಾಡಿದೆ. ಮೇಲ್ವಿಲೆ ಡಿಮ್ಯಾಲೊ ಸತತವಾಗಿ ಏಳುಗಂಟೆಗಳ ಕಾಲ ಅಸ್ತಿವಿಸರ್ಜನೆಯ ವಿವರಣೆ ನೀಡಿ ಜಗತ್ತಿನಾದ್ಯಂತ ಗಮನಸೆಳೆದರು.

ನನ್ನ ಸೋದರಮಾವರಾಗಿದ್ದ ಕೆ. ಸಿ ಶುಕ್ಲಾಂ ಎಂಬುವವರು ಅಸ್ತಿವಿಸರ್ಜನೆ ಕಾರ್ಯಕ್ರಮದ ಮೇಲ್ವಿಚಾರಕರಾಗಿದ್ದರು. ಕುಂಭಮೇಳದಲ್ಲಿ ಬಾಪೂರವರ ಅಸ್ತಿವಿಸರ್ಜನೆ ಮಾಡುವುದಕ್ಕೆ ಯಾವ ಸ್ಥಳ ಗೊತ್ತುಮಾಡಲಾಗಿತ್ತೋ ಆ ಸ್ಥಳದ ಬಳಿಯೇ ನಿಂತು ನೋಡುವಂಥ ಅವಕಾಶ ನನಗೆ ದೊರೆಯಿತು. ಅಲ್ಲಿ ನಿಂತಿದ್ದಂತಹ ಇನ್ನೂ ಕೆಲವು ವ್ಯಕ್ತಿಗಳೆಂದರೆ ಪಂಡಿತ್ ಜವಹರಲಾಲ್ ನೆಹರು ಮತ್ತು ಗವರ್ನರ್ ಜನರಲ್ ಲಾರ್ಡ್ ಮೌಂಟ್‌ಬ್ಯಾಟನ್. ಪಂಡಿತ್‌ಜಿ ಏನು ಮಾತನಾಡಿದರೆಂಬುದು ನನಗೆ ಸ್ಪಷ್ಟವಾಗಿ ನೆನಪಿದೆ. ಆದರೆ ಲಾರ್ಡ್ ಮೌಂಟ್ ಬ್ಯಾಟನ್ ಏನು ಮಾತನಾಡಿದರೆಂಬುದು ನನಗೆ ನೆನಪಿಲ್ಲ. ಮೌಲಾನ ಅಜಾದ್ ಅವರನ್ನು ಒಳಗೊಂಡಂತೆ ಇನ್ನೂ ಕೆಲವು ನಾಯಕರು ಅಲ್ಲಿ ನಿಂತಿದ್ದರು. ಅದೊಂದು ಐತಿಹಾಸಿಕ ಸಂದರ್ಭವಾಗಿತ್ತು. ಆ ಸಂದರ್ಭಕ್ಕೆ ಸಾಕ್ಷಿಯಾಗುವ ಅದೃಷ್ಟ ನನ್ನದಾಗಿತ್ತು. ಅಲ್ಲದೆ ಯಾವ ಬಾಪೂವನ್ನು ನಾನು ಓರ್ವ ಯುವ ವಿದ್ಯಾರ್ಥಿಯಾಗಿದ್ದಾಗ ಸಾವಿರದ ಒಂಭೈನೂರ ನಲವತ್ತಾರರಲ್ಲಿ ಅಲಹಾಬಾದ್ ರೈಲ್ವೆ ನಿಲ್ದಾಣದಲ್ಲಿ ಭೇಟಿ ಮಾಡಿದ್ದೆನೊ ಆ ಬಾಪೂವಿಗೆ ಶ್ರದ್ಧಾಂಜಲಿ ಅರ್ಪಿಸುವ ಅವಕಾಶ ನನಗೆ ಸಿಕ್ಕಿತು. ಆಗ ಗಾಂಧೀಜಿ ರೈಲ್ವೆಯ ಮೂರನೆಯ ದರ್ಜೆಯಲ್ಲಿ ಪ್ರಯಾಣಿಸುತ್ತಿದ್ದರು. ಅವರೊಂದಿಗೆ ಖಾನ್ ಅಬ್ದುಲ್ ಗಫರ್‌ಖಾನ್ ಐ. ಎನ್. ಎ. ದ ಶೂರ ಶಹನವಾಜ್ ಅವರು ಬಾಪೂವಿನೊಂದಿಗೆ ಇದ್ದರು. ಹರಿಜನೋದ್ಧಾರಕ್ಕರಾಗಿ ನಿಧಿ ಸಂಗ್ರಹಿಸುತ್ತಿದ್ದರು. ಆ ದಿನಗಳಲ್ಲಿ ಗಾಂಧೀಜಿಯವರ ಹಸ್ತಾಕ್ಷರ ಪಡೆಯಬೇಕಾದರೆ ಹರಿಜನ ಕೋಶಕ್ಕೆ ಐದು ರುಪಾಯಿಗಳನ್ನು ಕೊಡಬೇಕಾಗುತ್ತಿತ್ತು. ನನ್ನ ಸೋದರ ಸಂಬಂಧಿ ನನಗೆ ಐದುರುಪಾಯಿ ಕೊಟ್ಟು ತನ್ನ ಹಸ್ತಾಕ್ಷರ ಪುಸ್ತಕ ಕೊಟ್ಟಿದ್ದಳು. ನಾನು ಬಾಪೂವಿನ

ಹಸ್ತಾಕ್ಷರ ಪಡೆಯಲು ಅವರ ಬಳಿ ಹೋದೆ. ಆಗ ಅವರು ಐದು ರುಪಾಯಿ ಕೊಟ್ಟಿದ್ದೀಯ ಎಂದು ಕೇಳಿದರು ಹೌದು ಬಾಪೂ, ಹಣ ಕೊಟ್ಟಿದ್ದೇನೆ ಎಂದು ಅವರ ಹಸ್ತಾಕ್ಷರ ಪಡೆದೆ.

ಆಗ ಬಾಪೂ ನೌಖಾಲಿಗೆ ಹೋಗುತ್ತಿದ್ದರು. ಅಲ್ಲಿ ಅವರು ಕಾಲ್ನಡಿಗೆಯಲ್ಲಿ ಕೆಲ ಸ್ನೇಹಿತರೊಂದಿಗೆ ಹಳ್ಳಿಹಳ್ಳಿಗೆ ನಡೆದು ಕೋಮು ಗಲಭೆಯಿಂದಾಗಿ ಉಂಟಾಗಿದ್ದ ಅಶಾಂತಿಯ ಸ್ಥಳದಲ್ಲಿ ಶಾಂತಿ ಸ್ಥಾಪಿಸುವ ಕೆಲಸ ಮಾಡುತ್ತಿದ್ದರು. ಸ್ವಾತಂತ್ರ್ಯದ ದಿನಾಚರಣೆ ಆಚರಿಸಲು ಬಾಪೂ ದಿಲ್ಲಿಗೆ ಬರಲು ನಿರಾಕರಿಸಿದರು.

ನಿಮಗೆ ಜ್ಞಾಪಕ ಇರುವಂತೆ ಬಾಪೂ ಓರ್ವ ಹಿಂದೂ ಮತಾಂಧ ನಾಥೂರಾಂ ಗೂಡ್ಸೆಯಿಂದ ಕೊಲೆಮಾಡಲ್ಪಟ್ಟರು ಅದು ಜನವರಿ ೩೦ ೧೯೪೮, ಸುಮಾರು ಸಂಜೆ ಐದು ಮುವ್ವತ್ತರ ಹೊತ್ತು. ಉತ್ತರ ಪ್ರದೇಶದ ಒಂದು ಹಳ್ಳಿಯಲ್ಲಿ ಗೂಡ್ಸೆಯನ್ನು ಪೂಜಿಸಲು ದೇವಸ್ಥಾನವನ್ನು ಕಟ್ಟುತ್ತಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಅದನ್ನು ವಿರೋಧಿಸುವ ಧೈರ್ಯ ಮಾಡುತ್ತಿಲ್ಲ. ಅದನ್ನು ಖಂಡಿಸುವ ಮಾತಂತಿರಲಿ, ಮೋದಿಯವರು ಗಾಂಧೀಜಿಯವರ ಹೆಸರನ್ನು ರಾಜಕೀಯ ಲಾಭಕ್ಕಾಗಿ ಉಪಯೋಗಿಸಿ ಇಡೀ ಜಗತ್ತಿಗೆ ಮೋಸ ಮಾಡುತ್ತಿದ್ದಾರೆ.

ನಿಮ್ಮ ತಪ್ಪುಗಳನ್ನು ಬಹಿರಂಗವಾಗಿ ಒಪ್ಪಿಕೊಳ್ಳಿರಿ. ನಿಮ್ಮ ಜೊತೆಯವರು ಹಾಗೆಯೇ ಮಾಡುವಂತೆ ಪ್ರೋತ್ಸಾಹಿಸಿ. ಕೋಪಿಸಿಕೊಳ್ಳಬೇಡಿ. ಮಕ್ಕಳು ಬೀಳುವುದರ ಮೂಲಕವೇ ನಡೆಯುವುದನ್ನು ಕಲಿಯುತ್ತವೆ. ಮಗು ಬಿದ್ದಾಗಲ್ಲೇಲ್ಲ ನೀವು ಹೊಡೆದರೆ ಅದು ನಡೆಯುವುದನ್ನು ಕಲಿಯಲು ಬಯಸುವುದೇ ಇಲ್ಲ.

–ರಾಬರ್ಟ್ ಟೌನಸೆಂಡ

ಕಾಡಿಗೆ ರಕ್ಕಸ ರೈಲು

–ಗೀತಾ. ಎಚ್

ಒಂದು ಬಲಿಷ್ಠ ಸುಂದರ ಕುದುರೆ. ಹುಟ್ಟಿನಿಂದಲೇ ಪಡೆದ ನಾಯಕತ್ವದ ಗುಣ, ವಿವೇಕ, ಸನ್ನಡತೆಗಳು ಸ್ವಾಭಾವಕವಾಗಿಯೇ ಅದನ್ನು ಕುದುರೆಗಳ ಗುಂಪಿನ ನಾಯಕನನ್ನಾಗಿಸಿತು. ಇಂತಹ ಕುದುರೆ ಮಾನವನ ದುರಾಸೆಗೆ ಸೆರೆಸಿಕ್ಕಿ ಇತರ ಕುದುರೆಗಳೊಡನೆ ಮರದ ದಿಮ್ಮಿಗಳನ್ನೆಳೆಯುತ್ತಾ, ಉಕ್ಕಿನ ಹಳಿಗಳನ್ನೆಳೆಯುತ್ತಾ, ಕೊನೆಗೆ ರೈಲಿನ ಎಂಜಿನನ್ನೂ ಎಳೆಯುತ್ತಾ ದುಡಿಯುವಾಗ ಅಸ್ತಂಗತನಾಗಲಿರುವ ಸೂರ್ಯನೆಡೆಗೆ ಆಕಸ್ಮಿಕವಾಗಿ ನೋಡುತ್ತದೆ. ಥಟ್ಟನೆ ಸ್ಫುರಿಸುವ ಸತ್ಯವೆಂದರೆ ಈ ಹಳಿಗಳು, ಈ ಎಂಜಿನ್ನು ತಲುಪಲಿರುವುದು ತನ್ನವರ ಆವಾಸ ಸ್ಥಾನವನ್ನು! ಎಚ್ಚೆತ್ತ ಕುದುರೆ ನಾಗಾಲೋಟದಿಂದ ಓಡಿ ಮಾನವ ನಿರ್ಮಿತವೆಲ್ಲವನ್ನೂ ಧ್ವಂಸಮಾಡಿ ತನ್ನನ್ನೂ, ತನ್ನವರನ್ನೂ ಬಿಡುಗಡೆಗೊಳಿಸಿಕೊಂಡು ಸ್ವತಂತ್ರವಾಗುವ ಕಥೆಯೇ ಡಿಸ್ನಿ ಮೂವಿಸ್ವ್‌ರವರ ಅನಿಮೇಷನ್ ಚಿತ್ರ ಸ್ಪಿರಿಟ್: ದ ಸ್ಟಾಲಿಯನ್ ಆಫ್ ಸಿಮರನ್. ಇದರಲ್ಲಿ ಸ್ಪಿರಿಟ್ ಮತ್ತಿತರ ಕುದುರೆಗಳನ್ನು ಮಾನವನು ಕೈವಶ ಮಾಡಿಕೊಳ್ಳುವುದು, ಅವುಗಳ ಬದುಕನ್ನೇ ತಲ್ಲಣಗೊಳಿಸುವುದು ಅಭಿವೃದ್ಧಿ ಎಂಬ ಮರೀಚಿಕೆಗಾಗಿ. ೮೦ರ ದಶಕದ ಈ ಚಿತ್ರವು ಸುಮಾರು ೨೦೦ ವರ್ಷಗಳ ಹಿಂದಿನ ಅಮೇರಿಕದ ವಸಾಹತು ನೀತಿಗಳನ್ನೂ, ತನ್ಮೂಲಕ ಅಭಿವೃದ್ಧಿ ಪಥವೆನಿಸಿರುವ ರೈಲ್ವೆ ಸಂಪರ್ಕವನ್ನೂ ಹೇಗೆ ಜೀವಿಮಾರಕವಾಗಿದ್ದುವೆಂಬುದನ್ನು ಹೃದಯಸ್ಪರ್ಷಿಯಾಗಿ ಕಟ್ಟಿಕೊಡುತ್ತದೆ. ಸ್ಪಿರಿಟ್‌ನ ಸ್ವಾತಂತ್ರ್ಯ ಪ್ರೇಮಕ್ಕೆ ಮರುಳಾಗುವ ಮಕ್ಕಳ ಅಚ್ಚುಮೆಚ್ಚಿನ ಈ ಚಿತ್ರವನ್ನು ಎಷ್ಟೇ ಬಾರಿ ನೋಡಿದ್ದರೂ ಮತ್ತೆ ಮತ್ತೆ ನೋಡಬೇಕೆನಿಸುತ್ತದೆ. ಮಾನವರ ದೇಹಭಾಷೆ. ಹಾವ–ಭಾವದಷ್ಟೇ ಪರಿಣಾಮಕಾರಿಯಾಗಿ ಕುದುರೆಗಳೂ ವ್ಯಕ್ತಪಡಿಸಿವೆ.

ರೈಲ್ವೆ ಮಾರ್ಗಕ್ಕಾಗಿ ಹಳ್ಳಿಗಳನ್ನು ಹಾಕುವಾಗ ಆಗುವ ಅರಣ್ಯನಾಶ, ವನ್ಯಜೀವಿಗಳ ಆವಾಸ ಪಲ್ಲಟ ಮೊದಲಾದವನ್ನು ಕಣ್ಣಿಗೆ ಕಟ್ಟಿಕೊಡುವ ಚಿತ್ರವು, ಕೇಂದ್ರ ಸರ್ಕಾರದ ರೈಲ್ವೆ ಬಜೆಟ್ ಮಂಡನೆಯ ಸುದ್ದಿಗಳ ಮೂಲಕ ಮತ್ತೊಮ್ಮೆ ನೆನಪಾಯಿತು. ಬ್ರಿಟಿಷರ ಆಳ್ವಿಕೆಯ ಮುಂದುವರೆದ ಭಾಗವೋ ಎಂಬಂತೆ ಹೊಸ ಮಾರ್ಗಗಳನ್ನು ಕಲ್ಪಿಸಲಾಗುತ್ತಿದೆ. ಸೂಕ್ಷ್ಮ ಅರಣ್ಯ ಪ್ರದೇಶಗಳನ್ನು ಹಾದುಹೋಗಲಿರವ ರೈಲ್ವೆ ಮಾರ್ಗಗಳನ್ನು ಅರಣ್ಯಗಳಿವೆಯೆಂದೇ ಹಿಂದಿನ

ಸರ್ಕಾರಗಳು ಹಾಕಿರಲಿಲ್ಲ. ಮೈಸೂರು–ಕುಶಾಲನಗರ, ಮೈಸೂರು–ಸತ್ಯಮಂಗಲ, ನಂಜನಗೂಡ–ನೀಲಂಬೂರು ಇತ್ಯಾದಿ ಮಾರ್ಗಗಳ ಪ್ರಸ್ತಾವನೆಯಲ್ಲಿ ಎಷ್ಟು ಹೆಕ್ಟೇರ್ ಅರಣ್ಯ ಪ್ರದೇಶ ಯಾರು ಯಾರ ಪಾಲಾಗಲಿದೆ ಎಂಬುದನ್ನು ಆಲೋಚಿಸಬಹುದು. ಈಗಾಗಲೇ ರಸ್ತೆ ಮೂಲಕ ಸಂಪರ್ಕಗಳನ್ನು ಹೊಂದಿರುವ ಈ ಪ್ರದೇಶಗಳು ಸಾಕಷ್ಟು ಮುಂದುವರೆದಿವೆ. ರೈಲ್ವೆ ಸಂಪರ್ಕದ ಅವಶ್ಯಕತೆಯನ್ನೊಮ್ಮೆ ಪುನರಾವಲೋಕಿಸಬೇಕಿದೆ.

ಸಂರಕ್ಷಿತಾರಣ್ಯಗಳ ಮೂಲಕ ಹಾದು ಹೋಗುವ ಹೆದ್ದಾರಿಗಳಲ್ಲಿ ರಾತ್ರಿ ಸಂಚಾರದಿಂದ ಆಗುತ್ತಿರುವ ವನ್ಯಜೀವಿಗಳ ಹನನವನ್ನು ತಡೆಯುವುದೇ ದುಸ್ತರವಾಗಿರುವಾಗ ಯಾವುದೇ ಅಡೆತಡೆಗಳಿಲ್ಲದೆ, ವಿಶೇಷ ನಿಯಮಾವಳಿಗಳನ್ನುಳ್ಳ ರೈಲ್ವೆ ಸಂಚಾರ ಎಷ್ಟು ಮಾರಕ ಎಂಬ ಸತ್ಯವನ್ನು ಮನಗಾಣಬೇಕಿದೆ. ಒಮ್ಮೆಲೇ ಬೊಬ್ಬಿರಿದ ರೈಲಿನ ಹಾರನ್‌ಗಳಿಂದ ಎಷ್ಟು ವನ್ಯಜೀವಿಗಳು ಕಂಗೆಟ್ಟಾವೋ, ಅವುಗಳ ಸಂತಾನೋತ್ಪತ್ತಿಯ ಮೇಲೆಂಥಾ ದುಷ್ಪರಿಣಾಮವು ಬೀರೀತೋ! ಅವುಗಳ ಜೀವನ ಪದ್ಧತಿಯಲ್ಲಿ ಎಂತೆಂತಹ ಮಾರ್ಪಾಡುಗಳ ಬಂದು ಅವುಗಳ ಸ್ವಾಭಾವಿಕ ವಿಕಸನಕ್ಕೆ ಮಾರಕವಾದಾವೋ! ಇದ್ಯಾವುದರ ಬಗ್ಗೆಯೂ ಯಾವುದೇ ಅಧ್ಯಯನ ನಡೆಸುವ ಮಾನವ ಕೇಂದ್ರಿತ ಅಭಿವೃದ್ಧಿಗಾಗಿ ತೀರ್ಮಾನ ಕೈಗೊಳ್ಳುವುದು ಎಷ್ಟು ಸೂಕ್ತವೆಂಬುದಕ್ಕೆ ಪಶ್ಚಿಮ ಬಂಗಾಳದಲ್ಲಿ ಸಿಲಿಗುರಿ ಬಳಿಯ ರೈಲ್ವೆ ಪಥವೇ ನಿದರ್ಶನ.

'ಇಂಟೆರ್ನ್ಯಾಷನಲ್ ಎಲೆಫೆಂಟ್ ಫೌಂಡೇಷನ್' ಸಂಸ್ಥೆಯು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಸಹಯೋಗದೊಂದಿಗೆ ನಡೆಸಿದ ವೈಜ್ಞಾನಿಕ ಸಮೀಕ್ಷೆಯ ವರದಿಯ ಪ್ರಕಾರ ಕಳೆದ ೪೦ ವರ್ಷಗಳಲ್ಲಿ (೧೯೭೪–೨೦೧೩ರವರೆಗೆ) ವಯಸ್ಕ, ಬಾಲ ಹಾಗೂ ಮರಿಯಾನೆಗಳೂ ಸೇರಿದಂತೆ ೮೨ ಆನೆಗಳು ಅತಿವೇಗದಿಂದ, ಅಂದರೆ ಗಂಟೆಗೆ ೮೦ ಕಿ.ಮೀ. ವೇಗದಲ್ಲಿ ಚಲಿಸುವ ರೈಲಿಗೆ ಸಿಕ್ಕಿ ಸತ್ತಿವೆ. ಬ್ರಾಡ್‌ಗೇಜು ನಿರ್ಮಾಣವಾದಮೇಲಂತೂ ಈ ಆನೆಗಳ ಸಾವಿನ ಸಂಖ್ಯೆಯು ಹೆಚ್ಚಳವಾಗಿದೆ. ಗುಲ್ಮ– ಸಿವೊಕ್, ಸಿವೊಕ್ – ಬಗರಕೋಟೆ, ಊಡ್ಣಬಾರಿ □ ಡಂಡಿಂ, ಮಾಲ್ □ ಚಾಲ್ಸಾ, ಬನಾರ್ಹತ್, ದಲಗಾಂವ್, ಹಸಿಮಾರ ಮೊದಲಾದ ಸ್ಥಳಗಳಲ್ಲಿನ ರೈಲ್ವೆ ಹಳಿಗಳ ನಡುವೆ ರೈಲಿಗೆ ಸಿಕ್ಕಿ ಪ್ರಾಣ ತೆತ್ತ ಪ್ರಾಣಗಳು ಆನೆಗಳಷ್ಟೇ ಅಲ್ಲ, ಕಾಟಿಗಳು, ಕಡವೆ ಇತ್ಯಾದಿ ವನ್ಯಜೀವಿಗಳೂ ಸೇರಿವೆ. ೨೦೧೩ರ ನವೆಂಬರ್ ೧೩ರಂದು ಒಂದೇ ಅವಘಡದಲ್ಲಿ ೪೦–೫೦ ಆನೆಗಳು ರೈಲಿಗೆ ಸಿಕ್ಕಿ ೫ ವಯಸ್ಕ, ೨ ಮರಿಯಾನಿಗಳು ಸವನ್ನಪ್ಪಿ, ಹತ್ತು ಆನೆಗಳು ತೀವ್ರ ಗಾಯಗೊಂಡಿವೆ. ಪೂರ್ಬಶಾಯರ್ಬರಿ

ಎಂಬಲ್ಲಿ ೪ ಆನಿಗಳು ರೈಲಿಗೆ ಸಿಕ್ಕಿ ೨೦೧೫ರ ಮೇ ೮ರಂದು ಒಂದು ಆನೆ ಸತ್ತಿದೆ. ೨೦೧೪ರ ಜುಲೈ ೨ರಂದು ಅಲಿಪುರ್ದುವರ್ ಬಳಿ ಎರಡು ವಯಸ್ಕ ಆನೆಗಳು ರೈಲಿನಿಂದ ಜಜ್ಜಿಹೋಗಿವೆ. ಲೆಖ್ಖ ಬರೆಯಲು ತೊಡಗಿದರೆ ಅದರದೇ ವರದಿಯಾದೀತು! ಮಹಾರಾಷ್ಟ್ರ ರಾಜ್ಯದಲ್ಲೂ ಆನೆ, ಚಿರಚಿತಜ ಮತ್ತಿತರ ಪ್ರಾಣಿಗಳು ರೈಲಿಗೆ ಸಿಕ್ಕಿ ಸಾವನ್ನಪ್ಪಿವೆ. ರಾಜಾಸ್ಥಾನದ ಕೋಟಾ ಬಳಿ ರಾಜಧಾನಿ ಎಕ್ಸ್‌ಪ್ರೆಸ್ಸ್ ರೈಲಿಗೆ ಸಿಲುಕಿ ಸತ್ತ ಬ್ರೋಕನ್ ಟೈಲ್ ಹುಲಿ ರಣತಂಬೂರು ರಾಷ್ಟ್ರೀಯ ಉದ್ಯಾನದಿಂದ ಸುಮಾರು ೨೦೦ ಕಿ.ಮೀ ದೂರ ಕ್ರಮಿಸಿತ್ತು!

ಇಷ್ಟೆಲ್ಲಾ ಚರ್ಚಿಸುವಾಗ ರೈಲ್ವೆ ಮಾರ್ಗಗಳ ಅವಶ್ಯಕತೆಯೇನು ಎಂಬ ಪ್ರಶ್ನೆ ಎದುರಾಗುತ್ತದೆ. ಮೇಲ್ನೋಟಕ್ಕೆ ಜನಸಾಮಾನ್ಯರ ಸಂಚಾರಕ್ಕಾಗಿ ಕೈಗೆಟುಕುವ ದರದ ಸಂಪರ್ಕ ಸಾಧನವೆನ್ನಿಸುವ ರೈಲು ಹೆಚ್ಚಾಗಿ ಉಪಯೋಗವಾಗುವುದು ಸರಕು ಸಾಗಣೆಗಾಗಿ. ಸರಕುಗಳು ಸಾಗಣೆಯಾಗುವುದು ಕಚ್ಚಾವಸ್ತುಗಳು ದೊರಕುವ ಪ್ರದೇಶಗಳಿಂದ ಕೈಗಾರಿಕಾ ಪ್ರದೇಶಗಳಿಗೆ ಮತ್ತು ಒಂದು ಕೈಗಾರಿಕಾ ಪ್ರದೇಶದಿಂದ (ಕಚ್ಚಾ ವಸ್ತು) ಮತ್ತೊಂದು ಕೈಗಾರಿಕಾ ಪ್ರದೇಶಕ್ಕೆ (ಸಿದ್ಧವಸ್ತು). ಎನ್.ಸಿ.ಎಫ್. ನ ಡಾ॥ಸಂಜಯ ಗುಬ್ಬಿಯವರು ಹೇಳುವಂತೆ ಕೊಡಗು, ಕೇರಳದಂತಹ ಸ್ಥಳಗಳ ಕಾಫೀ, ಟೀ ಎಸ್ಟೇಟುಗಳ ಮಾಲೀಕರಿಗೆ ಸವಾಲಾಗಿರುವ ಕೂಲಿ ಕಾರ್ಮಿಕರ ಸಮಸ್ಯೆ ಮತ್ತೊಂದು ಸಂಭವನೀಯತೆ, ಸ್ಥಳೀಯವಾಗಿ ಸ್ಥಳೀಯವಾಗಿ ತುಟ್ಟಿಯಾಗಿರುವ ಅಥವಾ ಬಹುತೇಕ ಅಲಭ್ಯವಿರುವ ಕೂಲಿ ಕಾರ್ಮಿಕರ ಸೇವೆಯು ಬಲುದೂರದ ರಾಜ್ಯಗಳಿಗೆ ಸಂಪರ್ಕ ಕಲ್ಪಿಸುವ ರೈಲ್ವೆ ಮಾರ್ಗಗಳ ಮೂಲಕ ಬಿಹಾರ, ಉತ್ತರ ಪ್ರದೇಶ ಮೊದಲಾದ ರಾಜ್ಯಗಳಿಂದ ವಲಸೆ ಬರುವ ಕಾರ್ಮಿಕರಿಂದ ಅಗ್ಗದ ಸೇವೆಯು ಲಭ್ಯವಾಗುವುದು. ಕಾರಣವೇನೇ ಇರಲಿ. ಕಾಡಿನ ಮಧ್ಯೆಯೇ ಏಕೆ ರೈಲು ಮಾರ್ಗವೆಂಬ ಪ್ರಶ್ನೆಗೆ ಅವರ ಉತ್ತರ, ನೇರ ದಾರಿ, ಸರಳ ಭೂಸ್ವಾಧೀನ ಪ್ರಕ್ರಿಯೆ ಮತ್ತು ಕಡಿಮೆ ವೆಚ್ಚ ಮೊದಲಾದ ಕಾರಣಗಳು. ಉತ್ತರ ಕೇರಳದಲ್ಲಿ ಅಂತರರಾಷ್ಟ್ರೀಯ ವಾಯುಸಂಪರ್ಕವಿಲ್ಲದಿರುವುದರಿಂದ ಮೈಸೂರಿನಲ್ಲಿ ಅಂತಹ ಸೌಲಭ್ಯ ದೊರಕಿದ್ದೇ ಆದಲ್ಲಿ ರಾಷ್ಟ್ರೀಯ ಉದ್ಯಾನದ ಮೂಲಕ ಓಡಾಟ ಸುಲಭವಾಗಬಹುದೆಂಬ ಕಾರಣವೂ ಇರಬಹುದು. ಏನೇ ಇರಲಿ, ಅಭಿವೃದ್ಧಿ, ಸಂಪರ್ಕಗಳನ್ನು ಬಯಸುವವರು ಕಾಡಿನೊಳಗೆ ತೂರಿಸಾಗುವಬದಲು, ಹೊರಗಿನಿಂದಲೇ ಮಾರ್ಗಗಳನ್ನು ನಿರ್ಮಿಸಿಕೊಂಡರೆ ಒಳಿತು. ಕೆಲವೇ ಮಂದಿಯ ಹಿತಕಾಯುವ ಈ ಮಾರ್ಗಗಳು ನಾಡಿನ ಜೀವಾಳವಾಗಿರುವ ಶುದ್ಧಗಾಳಿ, ಮಳೆ – ಇವುಗಳನ್ನು ಒದಗಿಸುತ್ತಿರುವ ಈ

ದೇಶದ ವಿಸ್ತೀರ್ಣದ ಕೇವಲ ಶೇಕಡ ೫ ಭಾಗ ಮಾತ್ರವಿರುವ ಸಂರಕ್ಷಿತಾರಣ್ಯಗಳನ್ನು ಹೊರತುಪಡಿಸಿದರೆ ಸಾಕು. ಲಾಭಕರ ಉದ್ಯಮವಾಗಿ ಮಾರ್ಪಾಡಾಗಿರುವ ರೈಲ್ವೆ ಇಲಾಖೆಯು ಈ ಅಂಶಗಳನ್ನು ಗಮನಿಸಿ ನಾಗರಿಕ ಸೇವಾ ಇಲಾಖೆಯಾಗಿಯೇ ಉಳಿಯಲಿ ಎಂಬುದೇ ವನ್ಯಜೀವಿಗಳ ಹಿತಪರವಿರುವವರ ಕಾಳಜಿ. ಅಭಿವೃದ್ಧಿ ಬೇಕು, ಆದರೆ ವನ್ಯಜೀವಿಗಳ, ಕಾಡಿನ ಬೆಲೆ ತೆತ್ತು ಆಗುವುದು ಬೇಡ, ಪರಿಸರ, ಅರಣ್ಯ ಹಾಗು ಹವಾಮಾನ ಬದಲಾವಣಾ ಸಚಿವಾಲಯವು ಇಂತಹ ಹಾನಿಕಾರಕ ಯೋಜನೆಗಳಿಗೆ ಸಮ್ಮತಿಸದಿರಲಿ.

ಮೈಸೂರು ಅಮೆಚೂರ್ ನ್ಯಾಚುರಲಿಸ್ಟ್ ಸಂಸ್ಥೆಯ ಮನು. ಕೆ ಅವರು ಹೇಳುವಂತೆ, ಒಂದೆಡೆ ಆಂಧ್ರಪ್ರದೇಶದ ನೂತನ ರಾಜಧಾನಿ ಅಮರಾವತಿಯನ್ನು ನಿರ್ಮಿಸಲು ಸರ್ಕಾರಗಳು ೪೦೦ ಹೆಕ್ಟೇರ್ ಅರಣ್ಯ ಪ್ರದೇಶವನ್ನೇ ಡೀನೋಟಿಫೈ ಮಾಡಿದರೆ, ಮತ್ತೊಂದೆಡೆವನ್ಯಜೀವಿಗಳಿಗೆ ಕಾರಿಡಾರ್ ಕಲ್ಪಿಸಲು ಮತ್ತು ಪ್ರವಾಸೋದ್ಯಮ (ಈಕೋ ಟೂರಿಸಂ)ಕ್ಕಾಗಿ ವಿದೇಶಿ ನೇರ ಹೂಡಿಕೆ (ಎಫ್.ಡಿ.ಐ)ಯನ್ನು ಆಹ್ವಾನಿಸುತ್ತಿವೆ. ಈ ದ್ವಂದ್ವ ತಾಕಲಾಟಗಳ ಮಧ್ಯೆ ನಲುಗುವುದು ಲಕ್ಷಾಂತರ ವರ್ಷಗಳಿಂದ ಬಾಳಿದ ಪರಿಸರ ಮತ್ತು ಅಲ್ಲಿನ ಜೀವಿಗಳು ಸುಮಾರು ೧೫ ವರ್ಷಗಳಷ್ಟು ಹಿಂದೆ ಶ್ರೀಶೈಲಂನಲ್ಲಿ ಒಂದು ಸಣ್ಣ ಸಂರಕ್ಷಿತಾರಣ್ಯವನ್ನು ಸೃಷ್ಟಿಸಿ, ಕಾಣೆಯಾಗಿದ್ದ ಹುಲಿ, ಆನೆ ಮೊದಲಾದ ವನ್ಯಜೀವಿಗಳನ್ನು ಆಹ್ವಾನಿಸಿದ್ದ ಅದೇ ಆಂಧ್ರ ರಾಜ್ಯ ಇಂದು ಅದೇ ಜೀವಿಗಳ ಆವಾಸವನ್ನು ದೊಡ್ಡ ಪ್ರಮಾಣದಲ್ಲಿ ವಿನಾಶಪಡಿಸುತ್ತಿರುವುದೊಂದು ವಿಪರ್ಯಾಸವೇ ಸರಿ.

ಅರಣ್ಯದ ಕಾನೂನುಗಳ ಪರಿಧಿಗೇ ಬರದ ಸುವರ್ಣ ಚತುಷ್ಪಥ ಈಗಾಗಲೇ ರಾಷ್ಟ್ರೀಯ ಉದ್ಯಾನಗಳನ್ನು ಹೊಕ್ಕು ಬಳಸಿದ್ದಗಿದೆ. ಕಾಡಿನಲ್ಲಿ ಇಷ್ಟೆಲ್ಲಾ ಕೈಯಾಡಿಸುವ ಮಾನವ, ರೈಲಿನಲ್ಲಿ ಸರಕು ತುಂಬಿ ಕಾಡಿನ ಮಧ್ಯೆ ಸಂಚರಿಸುವಾಗ ಇನ್ನೇನೆಲ್ಲಾ ಮಾಡಬಹುದು ಎಂಬ ಆತಂಕ ಎದುರಾದರೆ ಸೂಕ್ತ ಪರಿಹಾರ ಮಾರ್ಗಗಳೂ ಕಾಣದಾಗಿವೆ.

ಅಮೆರಿಕೆಯ ಬುಡಕಟ್ಟೂ ಮೂಲ ನಿವಾಸಿಗಳಲ್ಲಿ ಕೊನಿಯವನಾದ ಯಾಹಿ ಸಂಸ್ಕೃತಿಯ ಇಶಿ ಹೇಳುವಂತೆ ನಿರ್ಮಲ, ಪ್ರಶಾಂತ ಕಾಡಿನ ನಡುವೆ ಸಂಚರಿಸುವ ದೈತ್ಯ ರಾಕ್ಷಸ (ಮನ್ಸ್‌ಟರ್) ರೈಲು!

ಪರಿಸರ ರಕ್ಷಕ ಪೋಪ್ ಫ್ರಾನ್ಸಿಸ್

(ಬಂಡವಾಳವಾದಿ ವ್ಯವಸ್ಥೆಯನ್ನು ಬದಲಾಯಿಸುವುದರ ಮೂಲಕ ಅರ್ಥಶಾಸ್ತ್ರ ಮತ್ತು ಸಮಾಜವನ್ನು ಹಾಳುಗೆಡುವುದನ್ನು ನಿಲ್ಲಿಸಬೇಕೆಂದು ಪೋಪ್ ಸರ್ಕಾರಗಳನ್ನು ಒತ್ತಾಯಿಸುತ್ತಿದ್ದಾರೆ. ಸಂ)

ನಾವು ಒಬ್ಬರನೊಬ್ಬರು ಛಿದ್ರ ಮಾಡುತ್ತಿಲ್ಲ, ಆದರೆ ನಮ್ಮೆಲ್ಲರ ಒಟ್ಟಾದ ಮನೆಯನ್ನು ಛಿದ್ರಗೊಳಿಸುತ್ತಿದ್ದೇವೆ. ಬಡವರು ಬಹಳ ಹಿಂದೆಯೇ ಹೇಳಿದ ಮಾತನ್ನು ಈಗ ವಿಜ್ಞಾನಿಗಳ ಸಮೂಹ ಅರ್ಥಮಾಡಿಕೊಳ್ಳುತ್ತಿದೆ. ಅವರು ಹೇಳಿದ್ದೇನೆಂದರೆ : "ಪರಿಸರಕ್ಕೂ, ಭೂಮಿಗೂ, ಜನಸಮುದಾಯಗಳಿಗೂ ಮತ್ತು ಪ್ರತಿವ್ಯಕ್ತಿಗಳಿಗೂ ಮತ್ತೆ ಸರಿಮಾಡಲಾಗದಷ್ಟು ಹಾನಿಯನ್ನು ಉಂಟುಮಾಡಲಾಗುತ್ತಿದೆ."

ಬಂಡವಾಳ ಒಂದು ಸಲ ದೈವವಾಗಿಬಿಟ್ಟು ಜನರ ತೀರ್ಮಾನಗಳನ್ನು ನಿರ್ದೇಶಿಸುವುದಾದರೆ, ಇಡೀ ಸಮಾಜೋಆರ್ಥಿಕ ವ್ಯವಸ್ಥೆಯ ಮೇಲೆ ಹಣದ ದುರಾಸೆ ಹಿಡಿತ ಸಾಧಿಸಿದಲ್ಲಿ ಅದರಿಂದ ಸಮಾಜ ಹಾಳಾಗುತ್ತದೆ; ಅದು ಪುರುಷರು ಮತ್ತು ಮಹಿಳೆಯರನ್ನು ಕೆಲಸಕ್ಕೆ ಬಾರದವರನ್ನಾಗಿ ಮಾಡುತ್ತದೆ ಮತ್ತು ಅವರನ್ನು ದಾಸ್ಯವೃತ್ತಿಗೆ ತಳ್ಳುತ್ತದೆ. ಅದು ಮಾನವೀಯ ಬಾಂಧವ್ಯವನ್ನು ನಾಶಮಾಡುತ್ತದೆ. ಜನರನ್ನು ಪರಸ್ಪರ ವಿರುದ್ಧಮಾಡುತ್ತದೆ. ನಮ್ಮ ಒಟ್ಟಾದ ಮನೆಯನ್ನು ಕೂಡ ಗಂಡಾಂತರಕ್ಕೆ ತಳ್ಳುತ್ತದೆ.

ಪರಿಸರಕ್ಕೂ ಮತ್ತು ಜನಸಮುದಾಯಗಳಿಗೂ ಶೋಷಣೆಮಾಡುವ ಬಂಡವಾಳವಾದಿ ವ್ಯವಸ್ಥೆಯಿಂದ ಆಗುವ ಈ ಮಾತುಗಳು ಅನಿರೀಕ್ಷಿತ ಮೂಲೆಯಿಂದ ಕೇಳಿಬಂದಿದೆ. ಆ ಮೂಲ ಕಳೆದ ಎರಡು ವರ್ಷಗಳ ಹಿಂದೆಯಷ್ಟೇ ರೋಮನ್ ಕ್ಯಾಥೋಲಿಕ್ ಚರ್ಚಿನ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡ ೭೮ ವರ್ಷದ ಅರ್ಜೆಂಟೈನಾದ ಯೇಸು ಅನುಯಾಯಿ. ಇವರು ಪೋಪ್ ಫ್ರಾನ್ಸಿಸ್ ಪೋಪ್ ಆಗುವ ಮೊದಲು ಅವರು ಕೆಮಿಕಲ್ ಟೆಕ್ನೀಷಿಯನ್ ಮತ್ತು ನೈಟ್ ಕ್ಲಬ್ ಬೌನ್ಸರ್ ಆಗಿ ಕೆಲಸ ಮಾಡಿದ್ದರಾದರೂ ಈಗ ಜಗತ್ತಿನ ಮೂಲ ಸಮಸ್ಯೆಗಳ ಬಗ್ಗೆ ಅಪಾರವಾದ ಅರಿವಿದೆ ಅದು ಆಶ್ಚರ್ಯಕಾರಕವಾಗುವಷ್ಟು ಇದೆ. ಅವರ ನಿಖರ ಮಾತುಗಳು ಮತ್ತು ಪುರೋಗಾಮಿಯಾದ ಜಾಗತಿಕ ದೃಷ್ಟಿಕೋನ ಗಮನಿಸುವಂತಾಗಿವೆ. ಹಣದ

ಅನಿರ್ಭಂಧಿತ ಬೆನ್ನಟ್ಟುವಿಕೆಇಂದಾಗಿ "ದೆವ್ವದ ಮರದ ವಾಸನೆ" ಎಂಬ ಪದಗುಚ್ಚವನ್ನು ಯಾವಾಗ ಕೇಳಿದ್ದೇವೆ?

ಪರಿಸರದ ವಿನಾಶದ ಬಗ್ಗೆಯಾಗಲಿ ಅಥವಾ ಅಂಥ ನೋವಿನ ವಿಷಯಗಳಬಗ್ಗೆಯಾಗಲಿ ಯಾವುದೇ ಸ್ಥಾನದಲ್ಲಿರುವ ಓರ್ವ ಧಾರ್ಮಿಕ ನಾಯಕ ಕ್ವಚಿತ್ತಾಗಿ ಮಾತನಾಡಿದ್ದಾನೆ. ಕುಲಾಂತರಿ ಆಹಾರ ಪದಾರ್ಥಗಳಿಂದ ಹಿಡಿದು ಸಿರಿಯಾದಲ್ಲಿಯ ಅಂತರ್ಯುದ್ಧದವರೆಗೆ ಪೋಪ್ ಫ್ರಾನ್ಸಿಸ್ ಗ್ರಹಿಕೆಗಳನ್ನು ಬದಲಾಯಿಸಲು ಮತ್ತು ಸರ್ಕಾರಗಳನ್ನು ಹಾಗು ಜನಸಮುದಾಯಗಳ ತಪ್ಪನ್ನು ತಿದ್ದಬೇಕಾದಂಥ ಕ್ರಿಯೆಗಳ ಬಗ್ಗೆ ತಮ್ಮ ಪಾಲಿನ ಕರ್ತವ್ಯಮಾಡಿದ್ದಾರೆ. ವ್ಯವಸ್ಥೆಯನ್ನು ಬದಲಾಯಿಸುವ ಬಗ್ಗೆ ಇನ್ನೂ ಹೆಚ್ಚು ವಿವರವಾದ ಉಪಾಯಗಳೊಂದಿಗೆ ತಮ್ಮ ಈ ಪ್ರಯತ್ನವನ್ನು ಮುಂದುವರೆಸಿದ್ದೇ ಆದರೆ ಬಹುಶಃ ಅವರು ಜಯಶೀಲರಾಗಬಹುದು.

ಅರ್ಥಶಾಸ್ತ್ರವನ್ನು ಜನರ ಸೇವೆಯಲ್ಲಿ ತೊಡಗಿಸಬೇಕು ಎಂಬುದೇ ಮೊದಲನೆಯ ಕೆಲಸವೆಂದು ಅವರು ಹೇಳುತ್ತಾರೆ. "ಎಲ್ಲರನ್ನು ಒಳಗೊಳ್ಳದ ಮತ್ತು ಅಸಮಾನತೆ ಉಂಟುಮಾಡದ ಸೇವೆಗಿಂತ ಹಣವೇ ಆಳುವ ಅರ್ಥಶಾಸ್ತ್ರವನ್ನ ನಾವು ನಿರಾಕರಿಸೋಣ ಆ ಅರ್ಥಶಾಸ್ತ್ರ ಕೊಲ್ಲುತ್ತದೆ. ಆ ಅರ್ಥಶಾಸ್ತ್ರ ಎಲ್ಲವನ್ನೂ ಹೊರಗಿಡುತ್ತದೆ. ಆ ಅರ್ಥಶಾಸ್ತ್ರ ಭೂಮಾತೆಯನ್ನು ನಾಶಮಾಡುತ್ತದೆ. ಬಹಳ ಕಡಿಮೆ ಪರಿಸರವಾದಿಗಳು ಬಂಡವಾಳವಾದದ ವ್ಯವಸ್ಥೆಗೂ ಮತ್ತು ಪರಿಸರದ ಗಂಡಾಂತರಕ್ಕೂ ನೇರ ಸಂಬಂಧವಿದೆ ಎಂದು ಹೇಳಿದ್ದಾರೆ.

ಕುಲಾಂತರಿ ಬೀಜದ ಬಗ್ಗೆ ಪೋಪ್ ರವರ ಧಿಗ್ದರ್ಶನ ಅಮೇರಿಕ ಸರ್ಕಾರ ಸ್ವಲ್ಪ ಯೋಚನೆ ಮಾಡುವುದಕ್ಕೆ ಅವಕಾಶಮಾಡುತ್ತದೆ. ಪೋಪ್ ತಂತ್ರಜ್ಞಾನವನ್ನು ಟೀಕಿಸಿದಾಗಲೆಲ್ಲ ಅದನ್ನು ಮುಚ್ಚಿಹಾಕಲು ಮುನ್ನುಗ್ಗಿದೆ. ಏಕೆಂದರೆ ಅವರು ಮಾಡಿದ ಟೀಕೆಯ ಪರಿಣಾಮ ಜಗತ್ತಿನಾದ್ಯಂಥ ಆಗುತ್ತದೆ. ಕೆಲವು ವರ್ಷಗಳ ಹಿಂದೆ ಈಗಿನ ಪೋಪ್‌ಗೆ ಮೊದಲು ಇದ್ದ ಪೋಪರು ಕುಲಾಂತರಿ ಬೀಜದ ಬಗ್ಗೆ ಇರುವ ತಮ್ಮ ನಿಲುವನ್ನು ಬದಲಾಯಿಸಬೇಕೆಂದು ಅಮೇರಿಕ ಸರ್ಕಾರದ ಅಧಿಕಾರಿಗಳು ಜನಾಭಿಪ್ರಾಯ ಸಂಗ್ರಹಿಸಿದ್ದರು. ಈಗಿನ ಪೋಪ್ ಅವರು ಹೆಚ್ಚು ತಾರ್ಕಿಕವಾದ ಮಾತನ್ನು ಆಡುತ್ತಾರೆ. (ಕುಲಾಂತರಿ ತಂತ್ರಜ್ಞಾನದ ಬಗ್ಗೆ ತಮ್ಮ ಖಚಿತವಾದ ಹೇಳಿಕೆಕೊಟ್ಟು ಈಗಿನ ಪೋಪ್ ಅವರು ಹೆಚ್ಚು ತಾರ್ಕಿಕವಾದ ಮಾತನ್ನು ಆಡುತ್ತಾರೆ) ಕುಲಾಂತರಿ ತಂತ್ರಜ್ಞಾನದ ಬಗ್ಗೆ ತಮ್ಮ ಖಚಿತವಾದ ಹೇಳಿಕೆಕೊಟ್ಟು ವಿವಾದದಲ್ಲಿ ಬೀಳಲು ಇಷ್ಟಪಡುವುದಿಲ್ಲ.

ಕುಲಾಂತರಿ ಬೀಜಗಳಿಂದ ಉಂಟಾಗಿರುವ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳಿಗೆ ಉದಾಹರಣೆಯಾಗಿ ಕೇಂದ್ರೀಕೃತವಾದ ಕೃಷಿ, ಪಲ್ಲಟಗೊಂಡ ಕೂಲಿಯಾಳುಗಳು ಮತ್ತು ಕಾರ್ಪೊರೇಟ್‌ಗಳ ಏಕಸ್ವಾಮತ್ಯ ಮುಂತಾದ ವಿಷಯಗಳನ್ನು ಎತ್ತಿ ತೋರಿಸಿ ಪೋಪ್ ಫ್ರಾನ್ಸಿಸ್ ಕೈಗಾರಿಕಾ ಕ್ಷೇತ್ರವನ್ನು ಎದುರಿಸಿದ್ದಾರೆ.

ಪೋಪ್‌ರವರು ಆಗಾಗ್ಗೆ ಪರಿಸರಾತ್ಮಕ ಚಿಂತೆಗಳನ್ನು ವ್ಯಕ್ತಪಡಿಸುತ್ತಾರೆ. ಆಗ ಅವರು ಕುಲಾಂತರಿ ಬೆಳೆಗಳಿಂದ ಜೀವ ವೈವಿಧ್ಯದಮೇಲೆ ಉಂಟಾಗುವ ಪರಿಣಾಮದ ಬಗ್ಗೆ ಹೇಳುತ್ತಾರೆ. ಈ ಪ್ರಕಾರದ ಬೆಳೆಗಳಿಂದಾಗಿ ಪರಿಸರದಲ್ಲಿಯ ಸಂಕೀರ್ಣ ಹೊಂದಾಣಿಕೆ ಹಾಳು ಆಗಿದೆ. ಉತ್ಪಾದನೆಯ ಬಹುತ್ವವನ್ನು ಕ್ಷೀಣಿಸಿದೆ. ಅದರಿಂದಾಗಿ ಪ್ರಾದೇಶಿಕ ಅರ್ಥವ್ಯವಸ್ಥೆಯ ಮೇಲೆ ದುಷ್ಪರಿಣಾಮ ಉಂಟಾಗಿದೆ. ಪೋಪ್‌ರ ಈ ಆರೋಪಗಳ ಬಗ್ಗೆ ಜೀವಶಾಸ್ತ್ರ ತಂತ್ರಜ್ಞಾನ ಕೈಗಾರಿಕೆ ಮೌನವಹಿಸಿದೆ. ಏಕೆಂದರೆ ವ್ಯಾಪಕ, ಸಮಂಜಸ, ವೈಜ್ಞಾನಿಕ ಮತ್ತು ಸಾಮಾಜಿಕ ಚರ್ಚೆಗೆ ಬರಬೇಕೆಂಬ ಸಮಂಜಸವಾದ ಬೇಡಿಕೆಯನ್ನು ಯಾರು ತಾನೆ ನಿರಾಕರಿಸಬಲ್ಲರು?

(ಸಾಭಾರ ಡೌನ್ ಟು ಅರ್ಥ್, ಅನು ಸು.ಕೌ)

ಸಮಾಜ ಎಂಬುದು ಪುಸ್ತಕಗಳ ಕುದಿತದಿಂದಾದ ಒಂದು ಲೇಹ. ಓದಲು ಯೋಗ್ಯವಾದ ಸಾಹಿತ್ಯದಿಂದ ಅದು ತನಗೆ ಬೇಕಾದ ಒಳ್ಳೆಯ ಗುಣಗಳನ್ನು ಪಡೆಯುತ್ತದೆ. –ಹೇಗೆ ಬಿಸಿನೀರು ಚಹಾ ಎಲೆಗಳಿಂದ ಶಕ್ತಿಪಡೆಯುತ್ತದೋ ಹಾಗೆ.

ಪುಸ್ತಕಗಳು ಯೌವನದ ಆಹಾರ, ವೃದ್ಧರಿಗೆ ವೃದ್ಧಾಪ್ಯದ ಆನಂದ, ಅಭಿವೃದ್ಧಿಯ ಶೃಂಗಾರ, ಕಷ್ಟಗಳಲ್ಲಿ ನೆಮ್ಮದಿಯ ತಾನಾ.

–ಶಿಶಿರೊ

ಗಾಂಧೀಜಿಯನ್ನು ಪರಿಚಯಿಸುವ ಕಷ್ಟ-ಎರೆಡು ಉದಾಹರಣೆಗಳು

-ಸದಾನಂದ್ ಆರ್.

ಒಂದು ತಿಂಗಳ ಹಿಂದಿನ ಮಾತು.ಕನ್ನಡದ ಪ್ರಸಿದ್ಧ ನಟರೋರ್ವರು ನಾಡಿನ ಪ್ರಮುಖ ಸಮಾಜಮುಖೀ ಬರಹಗಾರರೊಂದಿಗೆ ಮಾತನಾಡುತ್ತಾ 'ಗಾಂಧೀ ಲೋಹಿಯಾರಂತಹವರನ್ನು ನಮ್ಮಂತವರಿಗೆ ಪರಿಚಯಿಸಿ ಸಾರ್' ಎಂದು ಕೇಳಿದ ಸುದ್ದಿ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಹೊಸ ರೀತಿಯ ಸಿನಿಮಾಗಳಿಗೆ ತೆರೆದುಕೊಂಡಿರುವಯುವ ನಟನ ಕಾಳಜಿ ಮೆಚ್ಚುವಂತದ್ದು. ಹೇಳಿಕೆ ಓದಿದ ಮೇಲೆ 'ಗಾಂಧೀ ಲೋಹಿಯಾರಂತಹವನ್ನು ಪರಿಚಯಿಸುವುದು ಹೇಗೆ?" ಎನ್ನುವಪ್ರಶ್ನೆ ಮೂಡಿತು.

ಗಾಂಧೀ ಲೋಹಿಯಾರಂತರಹವರು ಬದುಕಿದ್ದನ್ನು ಬರೆದವರು. ಅವರ ಕುರಿತು ಏನೆ ಹೇಳಹೊರಟರು ಅದುಆಚರಣೆಯಲ್ಲಿ ಇದೆಯೇ ಎನ್ನುವುದು ಮುಖ್ಯವಾಗಿಯೇ ಆಗುತ್ತದೆ.ಗಾಂಧೀಯಂತಹವರನ್ನು ಪರಿಚಯಿಸುವುದರ ಕಷ್ಟ ಇರುವುದುಇಲ್ಲೇ.ಹತ್ತು ವರ್ಷಗಳ ಹಿಂದೆ ಮಹದೇಶ್ವರ ಬೆಟ್ಟದತಪ್ಪಲಿನಲ್ಲಿರುವ ಶಾಲೆಯೊಂದಕ್ಕೆ ನನ್ನ ಕೆಲಸದ ಮೇಲೆ ಹೋಗಿದ್ದೆ.ಅಲ್ಲಿನಮುಖ್ಯಶಿಕ್ಷಕರು ಒತ್ತಾಯ ಮಾಡಿದಕಾರಣ 'ಟೀ' ಹೀರುತ್ತಾ ಕುಳಿತ್ತಿದ್ದೆ.'ಪ್ಲಾಸ್ಟಿಕ್ ಲೋಟದಲ್ಲಿನಟೀ' ನನಲ್ಲಿ ಮುಜುಗರ ಮತ್ತುಅಸಾಹಯಕತೆಯನ್ನು ಮೂಡಿಸಿತ್ತು.ನನ್ನ ವೃತ್ತಿಯಕಾರಣದಿಂದ ಆ ಶಾಲೆಗೆ ಹೋಗಿದ್ದೆ.ಮುಖ್ಯಸ್ಥರ ವಿಶ್ವಾಸ ನನ್ನಕಾರ್ಯವನ್ನು ಯಶಸ್ಸುಗೊಳಿಸುತ್ತದೆ ತನ್ಮೂಲಕ ನನ್ನ ಸಂಬಳವನ್ನು ಗಟ್ಟಿಗೊಳಿಸುತ್ತದೆ. ಹಾಗಾಗಿ ಅವರಿಗೆಇಲ್ಲವೆನ್ನುವಧೈರ್ಯ ಸಾಲದೆಕಿರಿಕಿರಿಯೊಂದಿಗೆಟೀಕುಡಿದುಅದನ್ನು ಬಿಸಾಡಲು ಹೊರಬಂದೆ. ಅದೇ ಸಮಯಕ್ಕೆಅಲ್ಲಿಗೆ ಬಂದುಐದು/ ಆರನೇತರಗತಿಯ ಹುಡುಗ 'ಸಾ ಪ್ಲಾಸ್ಟಿಕ್ ಬಳಸ ಬೇಡಿಅಂತಾ ನಮಗೆಲ್ಲಾ ಹೇಳಿ, ನೀವು ಮಾಸ್ಟ್ರಗಳು ಅದರಲ್ಲೇಟೀಕುಡೀತಿರಲ್ಲಯಾಕೆ?" ಎಂದ.ಮೊದಲೇ ಮುಜುರುಗದಲ್ಲಿದ್ದ ನಾನು ಹಲ್ಲುಕಿರಿದು ಸುಮ್ಮನಾದೆ.ಇಲ್ಲೀಗ ಗಾಂಧಿಯವರ ಕುರಿತು ನನಗೆ ಮಾತನಾಡುವ ಅವಕಾಶವೆಲ್ಲಿದೆ!

ನನ್ನ ಕಾಲೇಜಿನಲ್ಲಿ ಮೂರ್‍ನಾಲ್ಕು ವರ್ಷಗಳ ಹಿಂದೆ ಇಕೋ ಕ್ಲಬ್ ಆರಂಭಗೊಂಡಿತು. ಸರ್ಕಾರದ ಹಣಕಾಸು ನೆರವು ಇದ್ದ ಕಾರಣ ಔಪಚಾರಿಕ

ಕಾರ್ಯಕ್ರಮದ ಏರ್ಪಾಡಾಗಿತ್ತು. ಪ್ರಕೃತಿ ಮತ್ತು ಪರಿಸರ ಮಾಲಿನ್ಯದ ಕುರಿತು ಉಪನ್ಯಾಸ ಅನುಭವ ಹಂಚಿಕೆ ಎಲ್ಲವೂಇತ್ತು.ಕಾರ್ಯಕ್ರಮದಅಂತ್ಯದಲ್ಲಿ, ಬಂದ ಅತಿಥಿಗಳಿಗೆ ಮತ್ತು ಸಿಬ್ಬಂಧಿಗೆ ಕಾಫೀನೀಡಲಾಯಿತು.ನಾನು ಸ್ವಂತಖರ್ಚಿನಲ್ಲಿಒಂದುಡಜನ್ ಸ್ಟೀಲ್ ಲೋಟಗಳನ್ನು ತಂದು ತೊಳೆದು ಇಟ್ಟಿದ್ದೆ.ಆದರೆಇಬ್ಬರು ಸಹದ್ಯೋಗಿಗಳು ಹುಡುಗರನ್ನುಕರೆದು 'ಪ್ಲಾಸ್ಟಿಕ್ ಲೋಟ ತರಿಸಿ ಆನಂತರವೇಕಾಫಿಕುಡಿದರು'.ಒಬ್ಬರಿಗೆಜಾತಿಕಾರಣದಿಂದಇನ್ನೊಬ್ಬರು ಮರುಬಳಕೆ ಮಾಡುವ ಲೋಟ ಬೇಡವಾದರೆ, ಮತ್ತೊಬ್ಬರಿಗೆಅದನ್ನು ತೊಳೆದಿಡುವ ಗೋಜಲು ಇಷ್ಟವಾಗಲಿಲ್ಲ! ಎರಡುಗಂಟೆ ಪ್ಲಾಸ್ಟಿಕ್‌ನ ಭಯಾನಕ ಪರಿಣಾಮಕುರಿತುಚರ್ಚೆಗೆ ವೇದಿಕೆ ಕಲ್ಪಸಿದ ಸಮಾಧಾನದಲಿದ್ದ ನಾನು ಕುದಿದು ಹೋದೆ.ಸಹದ್ಯೋಗಿಗಳಿಗೆ ಏನನ್ನು ಹೇಳಲಾಗದ ನನ್ನ ಅಸಹಾಯಕತೆ ಒಂದಡೆಯಾದರೆ, ಇನ್ನೊಂದೆಡೆ ಕಾಲೇಜಿನ ಮಕ್ಕಳ ಮುಂದೆತಲೆತಗ್ಗಿಸಬೇಕಾದ ಸ್ಥಿತಿ. ಹುಡುಗರು ಬಿಡಲಿಲ್ಲ. ಪ್ರಶ್ನೆ ಕೇಳಿಯೇ ಕೇಳಿದರು. 'ಸಾ ಪ್ಲಾಸ್ಟಿಕ್ ಬೇಡಅಂದು ನೀವು ಟೀಚರ್‌ಗಳೇ ಅದನ್ನ ಬಳಸ್ತೀರಲ್ಲಾ ಹೇಗೆ?"ಎಲ್ಲವನ್ನು ಬಿಡಿಸಿ ಹೇಳಲಾಗದ ಪರಿಸ್ಥಿತಿ.'ನಾನಂತೂ ಬಳಸಲ್ಲ. ಆದರೆ ಉಳಿದವರ ಕುರಿತು ಹೇಳುವುದು ಕಷ್ಟ.ನಿಮಗೆ ಅರ್ಥವಾಗಿದ್ದರೆ, ಬಳಸುವುದನ್ನು ನಿಲ್ಲಿಸಿ.ನಾವಿಷ್ಟು ಮಾಡಬಹುದು.ಉಳಿದವರ ಚಿಂತೆ ಬೇಡ' ಎನ್ನುತ್ತಾ ನಾನು ಲೋಟಗಳನ್ನು ತಂದಿರುವ ವಿಷಯವನ್ನು ಹೇಳಿ ಸುಮ್ಮನಾದೆ.ಆನಂತರಈ ಮಾಹಿತಿ ಆಎರಡು ಶಿಕ್ಷಕರನ್ನು ತಲುಪಿ ನನ್ನನ್ನು ತರಾಟೆಗೆ ತೆಗೆದು ಕೊಂಡು ರಂಪರಾಮಾಯಣವಾಯಿತು. 'ನೀನೊಬ್ಬನೆ ಸತ್ಯವಂತ, ಈ ಕಾಲೇಜಿನಗಾಂಧೀ' ಅನ್ನೋಮೂದಲಿಕೆಗೆ ನಾನು ತುತ್ತಾದರೆ, ಅವರು ಮರೆಯುವತನಕ ತರಗತಿಗಳಲ್ಲಿ ಹುಡುಗರಿಗೆ ಅವಹೇಳನ ತಪ್ಪಲಿಲ್ಲ! ಇನ್ನುಎಲ್ಲಿಗಾಂಧೀ ಲೋಹಿಯಾರು ಉಳಿದಾರು.ಅವರ ಉಳಿದರಲ್ಲವೆ ಪರಿಚಯಿಸುವುದು!

ಗಾಂಧೀಜಿಯವರಕಾಲದಲ್ಲಿ ಮತ್ತು ಲೋಹಿಯಾರಜೀವಂತವಿದ್ದ ದಿನಗಳಲ್ಲಿ ಅವರನ್ನು ಮೂದಲಿಸುವವರುಇಲ್ಲದಿರಲಿಲ್ಲ. ಆದರೆಅಂದುಅವರು ಬದುಕಿತೋರಿಸುತ್ತಿರುವ ಬದುಕನ್ನುಹಲವರಾದರೂ ಬದುಕುವ ಉದಾಹರಣೆಗಳಿದ್ದವು. ಈಗ! ಮಕ್ಕಳ ಕಲಿಕೆಯ ಹೊಣೆಯನ್ನು ಶಾಲೆಗೆ ವರ್ಗಾಯಿಸಿರುವ ಪೋಷಕರು ನಿರಾಳವಾಗಿದ್ದರೆ, ಕಲಿಸುವ ಜನರೂ ನಿರಾಳ! ಇವರ ನಡುವೆ ಮಕ್ಕಳು! ಅರೆ ಬರೆಅರ್ಥವಾದುದನ್ನುಅಂತಿಮಎಂದು ಬದುಕು ಕಟ್ಟಿಕೊಳ್ಳುತ್ತಿದ್ದಾರೆ. ಅವರನ್ನು ದೂಷಿಸುವುದು ಹೇಗೆ?

ಬದನವಾಳು ಸತ್ಯಾಗ್ರಹ ತೊಂದರೆಯಲ್ಲಿ

(ಸುಸ್ಥಿರ ಬದುಕಿನ ಬಗ್ಗೆ ಬಹಳ ಜನರಲ್ಲಿ ಆಸಕ್ತಿಯನ್ನು ಮೂಡಿಸಿದ್ದ ಬದನವಾಳು ಸತ್ಯಾಗ್ರಹ ಪ್ರಸನ್ನರವರ ನೇತೃತ್ವದಲ್ಲಿ ನಡೆದುಕೊಂಡು ಬಂದಿದೆ. ಆಸಕ್ತರು ಆ ಆಂದೋಲನದ ಬಗ್ಗೆ ಬಹಳ ನಿರೀಕ್ಷೆ ಮತ್ತು ಅಪೇಕ್ಷೆಯನ್ನು ಇಟ್ಟುಕೊಂಡಿದ್ದಾರೆ. ಆದರೆ ಇತ್ತೀಚೆಗೆ ಆ ಸತ್ಯಾಗ್ರಹದ ನೇತೃತ್ವದ ಗಣದಲ್ಲಿ ಬಿಕ್ಕಟ್ಟು ಉಂಟಾಗಿರುವಂತೆ ಕಾಣುತ್ತದೆ. ಸಾರ್ವಜನಿಕರಿಗೆ ಆ ಬಿಕ್ಕಟ್ಟಿನ ಆ ಪರಿಚಯವಾಗಲೆಂಬ ಉದ್ದೇಶದಿಂದ ಪ್ರಸನ್ನರವರ ರಾಜೀನಾಮೆ ಪತ್ರವನ್ನು ಇಲ್ಲಿ ಪ್ರಕಟಿಸಲಾಗಿದೆ ಸಂ)

ಪ್ರಿಯ ಸ್ನೇಹಿತರೆ,

ಬದನವಾಳು ಸತ್ಯಾಗ್ರಹ ಸಮಿತಿಗೆ ನನ್ನ ಕಾರ್ಯವೈಖರಿಯ ಬಗ್ಗೆ ಅಸಮಾಧಾನವಿದೆ. ಸಮಿತಿಯ ಚಟುವಟಿಕೆಗಳು ಸಮಿತಿಯ ಮೂಲಕವೇ ನಡೆಯಬೇಕೆಂದು ಸದಸ್ಯರು ಬಯಸುತ್ತಾರೆ. ಸಮಿತಿಯ ಕಾರ್ಯಕ್ರಮಗಳನ್ನು, ಮೊದಲು ನಿಶ್ಚಯಮಾಡಿ, ನಂತರ ಸದಸ್ಯರ ಗಮನಕ್ಕೆ ತರಲಾಗುತ್ತಿದೆ ಎಂಬುದು ಅವರ ಅಸಮಾಧಾನಕ್ಕೆ ಕಾರಣವಾಗಿದೆ. ಅವರ ಇತ್ತೀಚಿನ ಅಸಮಾಧಾನವು ಮಲೆಬೆನ್ನೂರಿನಲ್ಲಿ ಮಾರ್ಚ್ ೨೭ರಂದು ಆಯೋಜಿಸಲಾಗಿರುವ ಸುಸ್ಥಿರ ಬದುಕಿನ ಸಮಾವೇಶದ ಬಗೆಗೆ ಇದೆ. ಸಮಾವೇಶದ ದಿನಾಂಕ ಸ್ಥಳ ಇತ್ಯಾದಿ ಸಂಗತಿಗಳನ್ನು ನಿಶ್ಚಯಿಸಿರುವ ಮೊದಲು ಸದಸ್ಯರ ಅನುಮತಿ ಪಡೆಯಬೇಕಿತ್ತು ಎಂದವರು ಅಭಿಪ್ರಾಯ ಪಟ್ಟಿದ್ದಾರೆ. ಸುಸ್ಥಿರ ಬದುಕಿನ ಸಮಾವೇಶಗಳು ಪೂರ್ವನಿರ್ಧಾರಿತ ಕಾರ್ಯಕ್ರಮಗಳು. ಅವುಗಳ ಜಾಗ, ದಿನಾಂಕ, ಇತ್ಯಾದಿಗಳನ್ನು ನಿರ್ದರಿಸುವ ಸ್ವಾತಂತ್ರ್ಯವು ಕ್ಷೇತ್ರಕೆಲಸ ಮಾಡುವವರಿಗೆ ಲಭ್ಯವಿರಬೇಕು ಎಂದು, ಕ್ಷೇತ್ರಕಾರ್ಯದ ಅನುಭವದಿಂದಾಗಿ, ನಾನು ತಿಳಿದಿದ್ದೇನೆ. ಸಮೂಹ ನಾಯಕತ್ವದ ಎಲ್ಲೆಗಳನ್ನು ನಾನು ಮೀರಿಲ್ಲ ಎಂದು ನಾನು ನಂಬುತ್ತೇನೆ. ಅದೇನೆ ಇರಲಿ, ಈ ಭಿನ್ನಾಭಿಪ್ರಾಯಗಳಿಂದಾಗಿ ಸಮಿತಿಯ ಸಂಚಾಲಕರಾದ ಜಯದೇವ್ ಅವರು ತೀವ್ರತರವಾದ ಮುಜುಗರ ಅನುಭವಿಸುವಂತಾಗಿದೆ.

ಇಷ್ಟಕ್ಕೂ, ನಾನು, ಬದನವಾಳು ಸತ್ಯಾಗ್ರಹ ಸಮಿತಿಯ ಒಬ್ಬ ಸಾಮಾನ್ಯ ಸದಸ್ಯ ಮಾತ್ರ. ನನ್ನ ಅತಿ ಉತ್ಸಾಹದ ನಡವಳಿಕೆಯಿಂದಾಗಿ ಸಮಿತಿಯ ಸಂಚಾಲಕರಾದ ಜಯದೇವ್ ಅವರಿಗೆ ಮುಜುಗರವಾಗುವುದಾಗಲೀ, ಸಮಿತಿಯ ಶಿಸ್ತಿಗೆ ಭಂಗ ಬರುವುದಾಗಲೀ ಸಲ್ಲದು. ಮಲೇಬೆನ್ನೂರಿನ ಸಮಾವೇಶದ ದಿನಾಂಕವನ್ನು ನಿರ್ಧರಿಸಿದ ಅಶಿಸ್ತಿನ ಜವಾಬ್ಧಾರಿಯನ್ನು ಹೊತ್ತುಕೊಂಡು, ನಾನು ಸಮಿತಿಯ ಸದಸ್ಯತ್ವದಿಂದ ಹೊರಬರುತ್ತಿದ್ದೇನೆ. ಈ ರಾಜೀನಾಮೆಯು, ನನ್ನ ಮೇಲೆ ನಾನೇ ವಿಧಿಸಿಕೊಂಡ ನಿಗ್ರಹವಾದ್ದರಿಂದ, ಮುಂದೆಯೂ ಸಮಿತಿಯವರು ಕರೆದಾಗ ಸಮಿತಿಯ ಕಾರ್ಯಕ್ರಮಗಳಲ್ಲಿ ಸಂತೋಷದಿಂದ ಭಾಗವಹಿಸುತ್ತೇನೆಂದು ಬೇರೆ ಹೇಳಬೇಕಾದ ಅಗತ್ಯವಿಲ್ಲವಾಗಿದೆ.

ವಿಶ್ವಾಸವಿರಲಿ,
-ಪ್ರಸನ್ನ

ದಿನಾಂಕ: ೧೭-೦೩-೨೦೧೬
ಸ್ಥಳ : ಹೆಗ್ಗೋಡು

ನಾರಾಯಣ ಜಾಜೂ ಅವರಿಗೆ ಶ್ರದ್ಧಾಂಜಲಿ

(ಅನೇಕ ಶ್ರೀಮಂತ ಉದ್ದಿಮೆದಾರರು ಗಾಂಧೀಜಿಯವರ ಸಂಪರ್ಕಕ್ಕೆ ಬಂದಿದ್ದರು. ಅವರಿಗೆ ಗಾಂಧೀಜಿಯವರು "ಧರ್ಮದರ್ಶಿತ್ವ ತತ್ವದ ಭೋದನೆಯನ್ನು ಮಾಡಿದ್ದರು. ಅಂಥವರಲ್ಲಿ ಶ್ರೀಕೃಷ್ಣದಾಸ್ ಜಾಜೂ ಅವರು. ಅವರ ಮಗ ನಾರಾಯಣ್ ಜಾಜೂ ತಂದೆಯಂತೆಯೇ ಗಾಂಧೀ ಮಾರ್ಗದಲ್ಲಿ ನಡೆದು ಕೊನೆ ಉಸಿರು ಇರುವವರೆಗೂ ನಡೆದುಕೊಂಡು ಎಲ್ಲರ ಗೌರವದಾದರಗಳಿಗೆ ಪಾತ್ರರಾದರು. ಅವರು ಕಳೆದ ಡಿಸೆಂಬರ್ ಅಲ್ಲಿ ದೈವಾದೀನರಾದರು. ಅವರಿಗೆ ಸರ್ವೋದಯ ಕಾರ್ಯಕರ್ತರ ಶ್ರಧ್ಧಾಂಜಲಿ. ಸಂ)

ತಮ್ಮ ತೊಂಭತ್ನಾಲ್ಕು ಆಯುವಿನಲ್ಲಿ ಶ್ರೀ ನಾರಾಯಣ ಜಾಜುವಿನವರು ತೀರಿಕೊಂಡರು. ಅವರನ್ನು ಎಲ್ಲ ಜನರೂ ಪ್ರೀತಿಯಿಂದ ಕಾಕಾ ಸಾಹೇಬ್ ಎಂದು ಕರೆಯುತ್ತಿದ್ದರು.

ನಾರಾಯಣ ಜಾಜೂ ಅವರು ಗಾಂಧೀ ಮತ್ತು ವಿನೋಬಾರವರ ನಿಕಟ ಸಹಯೋಗಿಯಾಗಿದ್ದ ಶ್ರೀ ಕೃಷ್ಣದಾಸ್ ಜಾಜೂರವರ ಸುಪುತ್ರ ಆಗಿದ್ದರಿಂದ ಗಾಂಧೀ ಮತ್ತು ವಿನೋಬಾರ ಆದರ್ಶಗಳನ್ನು ಮುಂದಕ್ಕೆ ತೆಗೆದುಕೊಂಡು ಹೋದರು. ಅವರನ್ನು ವ್ಯವಹಾರಿಕ ಆದರ್ಶವಾದಿ ಎಂದು ಕರೆಯಲಾಗುತ್ತಿತ್ತು. ಮೌಲ್ಯಗಳಾಧಾರಿತ ಜೀವನ ಶೈಲಿಯನ್ನು ಅವರು ತಮ್ಮ ತಂದೆಯಿಂದ ಪರಂಪರಾಗತವಾಗಿ ಪಡೆದಿದ್ದರು ಮತ್ತು ಆ ಮೌಲ್ಯಗಳನ್ನು ಜೀವನ ಪೂರ್ತಿ ಆಚರಿಸದರಲ್ಲದೇ ತಮ್ಮ ಮುಂದಿನ ತಲೆಮಾರಿಗೂ ಅದನ್ನು ಒಪ್ಪಿಸಿಕೊಟ್ಟರು.

ಅವರು ಮೂಲತಃ ರಚನಾತ್ಮಕ ಸ್ವಭಾವದ ವ್ಯಕ್ತಿಯಾಗಿದ್ದರು. ಖಾದಿ ಮತ್ತು ಗ್ರಾಮೋದ್ಯೋಗ, ಗೋಸೇವೆ, ಶ್ರೀ ಶಕ್ತಿ ಜಾಗರಣೆ, ಕುಷ್ಠಸೇವೆಯಂಥ ಕ್ಷೇತ್ರಗಳಲ್ಲಿ ಸಕ್ರಿಯವಾಗಿದ್ದರು. ಚರಕದ ಜೊತೆ ಅವರ ನೆಂಟಸ್ತಿಕೆ ಎಷ್ಟೊಂದು ಆಳವಾಗಿ ಇತ್ತೆಂದರೆ ಅಂತಿಮ ಸಮಯದ ಕೇವಲ ಕೆಲದಿನಗಳ ಮೊದಲು ಅವರ ಸಂಬಂಧ ಚರಕದೊಂದಿಗೆ ಬಿಟ್ಟಿತು! ಸೇವೆಯ ಎಲ್ಲ ಕ್ಷೇತ್ರಗಳು ಅವರಿಗೆ ಸಹಜವಾಗಿ ಪ್ರಾಪ್ತವಾಗಿದ್ದವು. ಅವರ ಸ್ವಧರ್ಮವಾಗಿದ್ದವು. ಗಾಂಧಿ ಪ್ರಣೀತ ಈ ಎಲ್ಲ ಸಂಸ್ಥೆಗಳೊಂದಿಗೆ ಸಂಪರ್ಕವಿತ್ತಲ್ಲದೆ ಇನ್ನು ಬೇರೆ ಸಂಸ್ಥೆಗಳು ಮತ್ತು ಆಶ್ರಮಗಳೊಂದಿಗೂ ಕೂಡ ಅವರ ಸಂಪರ್ಕ ಇರುತ್ತಿತ್ತು.

ಸಾರ್ವಜನಿಕ ಜೀವನದಲ್ಲಿ ಅವರು ನೈತಿಕತೆಯ ಆಗ್ರಹ ಇಟ್ಟುಕೊಂಡಿದ್ದರು. ಆ ವಿಷಯದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದು ಸುತಾರಾಂ ಒಪ್ಪಿಗೆ ಇರಲಿಲ್ಲ. ವ್ಯವಹಾರ ಶುದ್ಧಿಗೆ ಆತಂಕ ಬಂದಾಗ ಅವರು

ತಮ್ಮ ವೈಚಾರಿಕ ವಿರೋಧ ಪ್ರಕಟಗೊಳಿಸುತ್ತಿದ್ದರು. ಹಾಗಿದ್ದಾಗಿಯೂ ಸಾರ್ವಜನಿಕ ಜೀವನದಲ್ಲಿ ಅನಿಂದಾವ್ರತದ ಪಾಲನೆ ಮಾಡುವ ಪ್ರಯತ್ನ ಇರುತ್ತಿತ್ತು. ವರ್ಧಾದಲ್ಲಿ ಶಿಕ್ಷಾಮಂಡಲ ಎಂಬ ಸಂಸ್ಥೆಗೆ ದೀರ್ಘ ಕಾಲದ ವರೆಗೆ ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ಅಧ್ಯಕ್ಷರಾಗಿ ಇದ್ದರು. ಆ ಶಿಕ್ಷಾಮಂಡಲವನ್ನು ಜಮ್ನಾಲಾಲ್ ಬಜಾಜ್ ಸ್ಥಾಪಿಸಿದ್ದರು. ಇಡೀ ಜಾಜೂ ಪರಿವಾರವನ್ನು ಒಂದು ಸೂತ್ರದಲ್ಲಿ ಬಂಧಿಸಿಟ್ಟಿದ್ದಂಥ ಶ್ರೇಯ ಅವರದ್ದಾಗಿದೆ. ಜಾಜೂ ಪರಿವಾರ ದೂರದೂರದ ವರೆಗೆ ಹರಡಿದೆ. ಇದಕ್ಕಿಂತಲೂ ದೊಡ್ಡ ಮಾತೇನೆಂದರೆ ಅವರು ಇನ್ನು ಬೇರೆ ಅನೇಕ ಪರಿವಾರಗಳನ್ನು ತಮ್ಮ ಪರಿವಾರದ ಜೊತೆಗೆ ಸೇರಿಸಿಕೊಂಡರು. ಅವರ ಲೋಕಸಂಗ್ರಹ ವ್ಯಾಪಕವಾಗಿತ್ತು. ಅವರ ಇಚ್ಛಾನುಸಾರ ಎಲ್ಲ ಸೊಸೆಯೊಂದಿರು ಕೈ ಜೋಡಿಸಿದರು ಮತ್ತು ಬಲ ಕೊಟ್ಟರು.

ಶುಭ್ರ ಖಾದಿವಸ್ತ್ರಧಾರಿಯಾದ ಪ್ರಸನ್ನ ವದನದ ಜಾಜೂಜಿ ವರ್ಧಾದ ಪ್ರತಿಯೊಂದು ಸಾರ್ವಜನಿಕ ಕಾರ್ಯಕ್ರಮದ ಅಭಿನ್ನ ಭಾಗವಾಗಿದ್ದರು. ಅವರ ಅನೇಕಾಂತ ಸ್ವಧ್ಯಾಯ ಮಂದಿರ ಎಲ್ಲರಿಗೂ ಮುಕ್ತವಾಗಿತ್ತು. ಕಳೆದ ಡಿಸೆಂಬರ್ ಹದಿನೈದರಂದು ಇಹಲೋಕದಿಂದ ಬಿಡುಗಡೆ ಹೊಂದಿದರು. ತೊಂಭತ್ತೊಂದು ವರ್ಷಗಳನ್ನು ಪೂರ್ತಗೊಳಿಸಿದ್ದರು. ಕಳೆದ ಮುವ್ವತ್ತೈದು ವರ್ಷಗಳಿಂದ ವ್ಯವಹಾರದಿಂದ ಪೂರ್ಣಮುಕ್ತವಾಗಿ ತಮ್ಮ ಎಲ್ಲ ಚಿಂತನೆ, ಶ್ರಮ ಮತ್ತು ಸಮಯವನ್ನು ಸಾರ್ವಜನಿಕ ಕಾರ್ಯದಲ್ಲಿ ತೊಡಗಿಸಿದ್ದರು. ಗಾಂಧಿ ಮತ್ತು ವಿನೋಬಾರ ವಿಚಾರಗಳ ಆಧಾರದ ಮೇಲೆ ನಡೆಯುವ ವಾರ್ಧಾದ ಎಲ್ಲ ಸಂಸ್ಥೆಗಳೊಂದಿಗೆ ಸಂಬಂಧ ಇರಿಸಿಕೊಂಡಿದ್ದರು. ಅಖಿಲಭಾರತ ಗೋಸೇವಾ ಸಂಘದ ಕಾರ್ಯಾಲಯವನ್ನು ಕಳೆದ ಹದಿನೈದು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದರು. ಪ್ರಾರಂಭದಲ್ಲಿ ಶ್ರೀ ರಾಧಾಕೃಷ್ಣ ಬಜಾಜ್ ಅವರೊಂದಿಗೆ ನಂತರ ಎರಡುಸಾವಿರದ ಒಂಭತ್ತರಿಂದ ಅವರು ಒಬ್ಬರೇ ನಡೆಸಿಕೊಂಡು ಬಂದರು. ಶ್ರೀ ಕೃಷ್ಣದಾಸ್ ಜಾಜೂ ಅವರಿಗೆ ಹಾರ್ದಿಕ ಶ್ರದ್ಧಾಂಜಲಿ.

ದುರ್ಮುಖಿ, ಸುಮುಖಿಯಾಗಲಿ

–ಡಾ॥ ಲೀಲಾವತಿ ದೇವದಾಸ್

ನಮಗೆ ಬಹಳ ಬೇಕಾದವರು, ತುಂಬಾ ದಿನಗಳ ನಂತರ ನಮ್ಮಲ್ಲಿಗೆ ಬರುತ್ತೇವೆಂದು ತಿಳಿಸಿದಾಗ, ನಮಗೆ ಖುಷಿಯಾಗಲಿಕ್ಕಿಲ್ಲ? ಅವರು ಬರಲು ಇನ್ನೂ ಒಂದೆರಡು ತಿಂಗಳಿರುವಾಗಲೇ ನಾವು ಅವರ ಎಲ್ಲಾ ಸೌಕರ್ಯಗಳಿಗೆ ಬೇಕಾಗುವ ಸಿದ್ಧತೆಗಳನ್ನು ಬೇಗ ಬೇಗ ಮಾಡತೊಡಗುತ್ತೇವೆ. ಹಾಗೆಯೇ ನಮ್ಮ ಭೂಮಿಯಾಯಿ ಕೂಡ ವಸಂತಋತು ಕಾಲಿಡಲು ಚೈತ್ರಮಾಸ ಹೆಜ್ಜೆಯಿಡಲು, ಇನ್ನೂ ಸಮಯವಿರುವಾಗಲೇ ಆ ಸಿಹಿಸುದ್ಧಿಯನ್ನು ತನ್ನೊಡಲಿನ ಬದಲಾವಣೆಗಳಿಂದಲೇ ಸೂಕ್ಷ್ಮವಾಗಿ ಗ್ರಹಿಸಿ, ಆಗಲೇ ಗಿಡಮರಗಳು ಸ್ವಲ್ಪಸ್ವಲ್ಪವಾಗಿ ಚಿಗುರೊಡೆಯುವಂತೆ ಮಾಡಿದ್ದಾಳೆ! ಮಾಮರಗಳಲ್ಲಿ ಹೂ ಗೊಂಚಲು ಕಾಣತೊಡಗಿವೆಯಾದರೂ ತಿಳಿಹಸಿರ, ತುಸುಗೆಂಪು ಚಿಗುರುಗಳು ತಲೆಯೆತ್ತಿವೆಯಾದರೂ, ಆ ಚಿಗುರುಗಳನ್ನು ಸವಿಯುವ ಕೋಗಿಲೆಯ ಪ್ರೇಮ ಸಂದೇಶ ಹೊತ್ತ ಪ್ರಣಯ ಯಾಚನೆಯ ಆರ್ತಸ್ವರ ನಮ್ಮ ಕಿವಿಗೆ ಬೀಳಬೇಕಾದರೆ, ನಾವು ಚೈತ್ರಕ್ಕೆ ಕಾಯಬೇಕಾಗಿದೆ.

ಬಂದ, ಬಂದ, ವಸಂತ ಬಂದ! ಮರಗಳು, ಹೊಚ್ಚಹೊಸ ಎಲೆಗಳ ದಟ್ಟ ಉಡುಗೆ ತೊಟ್ಟಿವೆ, ಮಾಗಾಯಿಗಳು ತೂಗಾಡುತ್ತಿವೆ, ಆಲೆಮನೆಗಳಿಂದ ಸಿಹಿ ಬೆಲ್ಲದ ಸುವಾಸನೆ ಗಾಳಿಯಲ್ಲಿ ತೇಲಿಬರುತ್ತಿದೆ. ಕೋಗಿಲೆಗೆ ತನ್ನ ರೂಪದ ಬಗ್ಗೆ ಸ್ವಲ್ಪ ಕೀಳರಿಮೆಯೇ ಕಾರಣವೋ ಏನೋ! ಅದು ಸದಾ ಎಲೆಮರೆಯಲ್ಲೇ ಹುದುಗಿದ್ದು, ತನಗಿರುವ ದಿವ್ಯ ಕಂಠಸಿರಿಯನ್ನು ಅಲ್ಲಿಂದಲೇ ಹೊಮ್ಮಿಸಿ, ತನ್ನ ಬಾಳ ಸಖಿಗಾಗಿ ಹಂಬಲಿಸುತ್ತಿದೆ. ಅನನುಕರಣೀಯವಾದ ಆ ವಿರಹಗಾನದ ಧ್ವನಿ ಕೇಳಿ, ನಮ್ಮೊಳಗೂ ಮಧುರ ಭಾವನೆಗಳು ಏಳತೊಡಗಿವೆ. "ಮತ್ತೆ ಮಧುಮಾಸ" ಬಂದೇ ಬಿಟ್ಟಿದೆ!

ದುರ್ಮುಖಿ! ಎಂಥಾ ಹೆಸರಪ್ಪಾ ಎಂದು ಈ ವರ್ಷಕ್ಕೆ ಅಂಜದಿರಿ. ಕವಿ ಹಾಡಿರುವಂತೆ, 'ಚೆಲುವಿಗೆ ಯಾವ ಹೆಸರಿದ್ದರೇನು, ಅದರ ಸೊಬಗು ಮಸಳುವುದೆ?' ದುರ್ಮುಖಿ ಹೆಸರಿದ್ದಾಕ್ಷಣ ಗಿಡಮರಗಳು ಚಿಗುರೊಡೆಯುವುದಿಲ್ಲವೇನು? ಈ ದಿನದ ಹೊಸತನ ಹಳತಾಗುತ್ತೇನು? ಹೊಸ ಯುಗಾದಿಯ ನವನವೋತ್ಸಾಗ ತಣ್ಣಗಾಗತ್ತೇನು? ಇಲ್ಲ. ದುರ್ಮುಖಿ,

ಸುಮುಖಿಯಾಗುವುದು ನಮ್ಮ, ನಿಮ್ಮ ಕೈಗಳಲ್ಲಿದೆ, ನೆನಪಿರಲಿ. ದೇಹಶುದ್ಧಿಯ ಜೊತೆಯಲ್ಲೇ ಮನಸ್ಸಿನಲ್ಲಿ ಹುದುಗಿರಬಹುದಾದ ಸಕಲ ನಕಾರಾತ್ಮಕಭಾವ ಭಾವನೆಗಳನ್ನೂ ಅಂತಹ ಎಲ್ಲಾ ಕಂತೆಬೊಂತೆಗಳನ್ನೂ ಕಿತ್ತೆಸಿದು ಬಿಡೋಣ. ಸಕಾರಾತ್ಮಕ ಸ್ನೇಹಮಯ ಉತ್ಸಾಹ, ಉಲ್ಲಾಸಗಳಿಂದ ನಮ್ಮ ಹೃದಯಗಳನ್ನು ಮೀಯಿಸೋಣ. ಅಂಗಳದಲ್ಲಿ ಅರಳಿ, ಕಲೆಯ ಬಲೆ ಹಾಸಿದಂತಿರುವ ಬಣ್ಣ ಬಣ್ಣದ ರಂಗೋಲಿಯ ಚುಕ್ಕಿಗಳು ಒಂದಕ್ಕೊಂದು ಸಂಪರ್ಕಿಸುತ್ತಾ, ನಮಗೂ ಒಮ್ಮನ, ಒಮ್ಮತ, ಐಕ್ಯತೆ, ಸಂವಹನಗಳ ದಿವ್ಯ ಸಂದೇಶವನ್ನು ಸಾರುತ್ತಿವೆ.

ಎಲ್ಲಾ ಸರಿ, ಹೊಟ್ಟೆ ಚುರುಗುಟ್ಟುತ್ತಿದೆ ಅಲ್ಲವೆ? ಹೋಳಿಗೆಯ ನರುಗಂಪಿನ ಜತೆಗೆ ಅದನ್ನು ಪ್ರೀತಿಯಿಂದ ತಟ್ಟುತ್ತಿರುವ ಆಕರ್ಷಕ ಶಬ್ದ ನಮ್ಮನ್ನು "ಬೇಗ ಊಟಕ್ಕೆ ಬನ್ನಿ" ಎಂದು ಕೈ ಬೀಸಿ ಕರೆಯುತ್ತಿದೆ. ಊಟಕ್ಕೆ ಬಡಿಸುವ ಪ್ರತಿಯೊಂದು ತಿನಿಸಿನಲ್ಲೂ ಒಂದೊಂದು ಅರ್ಥ ಹುದುಗಿದೆ. ಸಪ್ಪೆ ಕಣಕವು ಸವಿಯಾದ ಬೇಳೆ, ಬೆಲ್ಲ ಸೇರಿದ ಕಣಕವನ್ನು ಆವರಿಸಿಕೊಂಡು ನಮ್ಮ ಮುಂದೆ ಹೋಳಿಗೆಯಾಗಿ ಬಂದಾಗ, ಬಾಳಿನಲ್ಲಿ ಯಾವುದು ಮುಖ್ಯ, ಯಾವುದು ಅಮುಖ್ಯ ಎನ್ನುವ ಚಿಂತನೆ ಹೊಕ್ಕು, ನಮ್ಮ ಮುಂದಿನ ದಿನಗಳಲ್ಲಿ ಕೆಲವು ನೀರಸ ಕ್ಷಣಗಳಿದ್ದರೂ ಸಹ ಅವನ್ನು ನಾವು ರೋಚಕವಾಗಿಸಿಕೊಳ್ಳಬಲ್ಲೆವು ಎಂಬ ಆತ್ಮವಿಶ್ವಾಸ ನಮ್ಮಲ್ಲಿ ತುಂಬುತ್ತದೆ.

ಇನ್ನು, ಆ ಬೇವು, ಬೆಲ್ಲ ಬೆರೆಸಿದ ಚಟ್ನಿಯೋ! ಹೊಸ ವರ್ಷ ಸುಖವನ್ನೂ ತರಬಹುದು, ದುಃಖವನ್ನೂ ತರಬಹುದು, ಆಗಾಗ ಸೋಲನ್ನೂ ನಮ್ಮ ಮುಂದಿಡಬಹುದು, ಗೆಲುವನ್ನೂ ಉಣಬಡಿಸಬಹುದು. ಎಲ್ಲವನ್ನೂ ಸಮನಾಗಿ ಕಂಡು, ಕಲಸಿ ಉಂಡಾಗ ಗೀತೆಯ "ಸುಖ ದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾ ಜಯೌ" ಎಂಬ ಸುವರ್ಣ ವಚನ ನಮ್ಮ ಒಳಗಣ್ಣಿನಲ್ಲಿ ಹೊಳೆಯುತ್ತದೆ.

ಹೌದು, ಇಂದಿನ ಊಟದಲ್ಲಿ ಸೇರಿರುವ ಸಿಹಿ, ಕಹಿ, ಉಪ್ಪು, ಹುಳಿ, ಖಾರಗಳು-ಸುಖ, ದುಃಖ, ಭಯ, ಜುಗುಪ್ಸೆ, ಆಶ್ಚರ್ಯಗಳನ್ನು ಪ್ರತಿಧ್ವನಿಸುತ್ತವೆ. ಎಲ್ಲವನ್ನು ಒಳಗೊಂಡು ಅದು, ಮುಂಬರುವ ಸವಸ್ತಕ್ಕೂ ನಾವು 'ಸೈ' ಎನ್ನಬೇಕು ಎಂದು ಕಲಿಸುತ್ತದೆ.

ಇದು, ಶಾಲಿವಾಹನ ಶಕೆಯ ವರ್ಷಾರಂಭ. ಈ ವರ್ಷವು ಗ್ರಿಗೋರಿಯನ್ ವರ್ಷಕ್ಕಿಂತ ೭೮ ವರ್ಷ ಕಡಿಮೆ ಇರುತ್ತದೆ. ಈ ಪುಣ್ಯ ದಿನದ ಕುರಿತು ವಿಜ್ಞಾನ ಏನು ಹೇಳುತ್ತದೆ? ಹನ್ನೆರಡನೇ ಶತಮಾನದಲ್ಲೇ

ಕರ್ನಾಟಕದ ಹೆಮ್ಮೆಯ ಪುತ್ರನೂ ವೈಜ್ಞಾನಿಕ ಚಿಂತನೆಯನ್ನು ಬಿತ್ತಿದಾತನೂ ಆದ ಭಾಸ್ಕರಾಚಾರ್ಯರು ಹುಟ್ಟಿದ್ದು, ನಮ್ಮ ವಿಜಯಪುರದಲ್ಲಿ. ಈ ಧೀಮಂತ, ಆಳವಾದ ಲೆಕ್ಕಾಚಾರ ಮಾಡಿ, ಯುಗಾದಿಯ ದಿನವನ್ನು ನಿರ್ಧರಿಸಿದ್ದು, ನಾವು ಅದೇ ಜಾಡಿನಲ್ಲೇ ಈಗಲೂ ನಡೆಯುತ್ತಿದ್ದೇವೆ.

ನಮ್ಮ ವಿಜ್ಞಾನ ಸಾಹಿತಿ ಜಿ.ಟಿ.ನಾರಾಯಣರಾಯರು ಹೇಳುವುದು ಸ್ವಲ್ಪ ಭಿನ್ನ. ಅವರು ಡಿವಿಜಿಯವರ 'ಗ್ರಹಗತಿಯ ತಿದ್ದುವನೆ ಜೋಯಿಸನು ಜಾತಕದಿ?' ಎನ್ನುವ ಸಾಲುಗಳನ್ನು ಉದಾಹರಿಸುತ್ತಾ "ಗ್ರಹಗತಿಗಳ ಬದಲಾವಣೆಗಳ ಕಾರಣ, ಯುಗಾದಿಯನ್ನು ನಾವು ಮಾರ್ಚ್ ೨೨ರಂದು ಆಚರಿಸಬೇಕು" ಎಂದು ತಿದ್ದುತ್ತಾರೆ. ಆದರೆ, ಏನಾದರೂ ಸರಿ, ಯುಗಾದಿಯ ಸಡಗರ, ಸಂಭ್ರಮ, ಸಂತೋಷಗಳಲ್ಲಿ ಮುಳುಗುವುದೇ ನಮಗೆ ಮುಖ್ಯ. ಲೆಕ್ಕಾಚಾರಗಳ ಈ ಗೋಜು, ಗೊಂದಲಗಳ ಪರಿವೆಯೇ ಬೇಡ ಎನ್ನುತ್ತೇವೆ ನಾವು! ತಮಿಳುನಾಡಿನಲ್ಲಿ ನಕ್ಷತ್ರಾಧಾರಿತ ಸೌರಮಾನ ಯುಗಾದಿಯು ಈ ವರ್ಷ ಏಪ್ರಿಲ್ ೧೪ರಂದು ಬರುತ್ತಿದೆ.

ಇಂದಿನ ಆನಂದಕ್ಕೆ ಮತ್ತೊಂದು ಕಾರಣವೂ ಉಂಟು. ಈವರೆಗೆ ನೀಳಿಕವಾಗಿದ್ದ ಕತ್ತಲ ಸಮಯ ಬೆಳಕಿನ ಗಳಿಗೆಗಳನ್ನು ಹೆಚ್ಚಿಸುತ್ತಾ ಹೋಗುತ್ತದೆ. ರಾತ್ರಿ, ಹಗಲು ಸಮನಾಗಿರುವ ಶುಭದಿನ ಇದು, ಬೆಳಕು ಎಂದಿದ್ದರೂ ಚೈತನ್ಯದಾಯಿ, ಹಾಗಾಗಿ ನಾವೂ ನೀವೂ ಆಕಾಶಕಾಯಗಳ ಚಲನೆಗಳನ್ನು ಬದಿಗಿಟ್ಟು, ಯುಗಾದಿಯು ಅನನ್ಯ ಸಂಭ್ರಮದಲ್ಲಿ ಒಂದಾಗೋಣ.

ಫಲ್ಗುಣ ತನ್ನ ಕರ್ತವ್ಯ ಮುಗಿಸಿ, ಚೈತ್ರಕ್ಕೆ ಶುಭಕೋರಿದ್ದಾನೆ.

ಕಳೆದ ಕೆಲವು ತಿಂಗಳ ಅಸಾಧ್ಯ ಚಳಿಯನ್ನು ಪಕ್ಕಕ್ಕಿರಿಸಿ, ಬಿಸಿಲು ತರುವ ಚೈತ್ರಕ್ಕೆ ಆದರದಿಂದ ಜಾಗಕೊಟ್ಟಿದ್ದಾನೆ. ಗರಗರ ತಿರುಗುತ್ತಾ ಸೂರ್ಯನನ್ನು ಅಂಡಾಕಾರದ ಕಕ್ಷೆಯಲ್ಲಿ ಪ್ರದಕ್ಷಿಣೆ ಮಾಡುತ್ತಿರುವ ಭೂಮಿ, ತುಸು ವಾಲಿಕೊಂಡು ಸ್ವಲ್ಪ ಸ್ವಲ್ಪವಾಗಿ ದಿಕ್ಕು ಬದಲಾಯಿಸುತ್ತಾ, ನಮಗೆ ಋತುಮಾನಗಳ ಈ ವೈಶಿಷ್ಟ್ಯ ವೈವಿಧ್ಯತೆಗಳ ಅದ್ಭುತ ಕೊಡುಗೆ ನೀಡಿರುವುದು ನಮ್ಮ ಭಾಗ್ಯ, ಅಲ್ಲವೆ?

ಬನ್ನಿ, ಯುಗಾದಿಯ ಈ ಪುಣ್ಯದಿನದಲ್ಲಿ ನಮಗಿರುವುದನ್ನು ಹಂಚಿಕೊಳ್ಳೋಣ. ಕಹಿಯನ್ನು ಪಕ್ಕಕ್ಕೆ ಸರಿಸಿಬಿಡೋಣ. ಎಲ್ಲಾ ದ್ವೇಷ, ಮೇಲು ಕೀಳು ತರತಮ ಭಾವನೆಗಳನ್ನೂ ಮನಸ್ಸಿನಿಂದ ಕಿತ್ತೆಸೆಯೋಣ.

ಯಾವ ಅನಪೇಕ್ಷಿತ ಕೊರಗು, ಆತಂಕ, ಭರ್ತ್ಸನೆ, ಘರ್ಷಣೆಗಳಿಗೂ ನಮ್ಮೊಳಗೆ ಜಾಗ ನೀಡುವುದು ಬೇಡ ದುರ್ಮುಖಿ, ಸುಮುಖಿಯಾಗಲಿ.

–ಕಸ್ತೂರಿ ಸಾಭಾರ

ಕರ್ನಾಟಕವೂ ಅನುಸರಿಸಲಿ

ಪ್ರತಿದಿನ ದಿನಪತ್ರಿಕೆಗಳ ಮುಖಪುಟದಲ್ಲಿ ಅಹಿತಕರ ಸುದ್ದಿಗಳನ್ನೇ ಓದುತ್ತಿರುವ ಸಂದರ್ಭದಲ್ಲಿ ಬಹು ಒಳ್ಳೆಯ ಸುದ್ದಿಯನ್ನು ಓದಿ ಸಮಾಧಾನವೂ, ಸಂತೋಷವೂ ಆಯಿತು. ಬಿಹಾರದ ಮುಖ್ಯಮಂತ್ರಿ ಶ್ರೀ ನಿತೀಶ್‌ಕುಮಾರ್‌ರವರು ತಮ್ಮ ರಾಜ್ಯಾದ್ಯಂತ ಎಲ್ಲ ಬಗೆಯ ಮದ್ಯಪಾನವನ್ನು ನಿಷೇಧಿಸಿದ್ದಾರೆ ಎಂಬುದೇ ಆ ಸುದ್ದಿ. ಮಹಾತ್ಮ ಗಾಂಧಿ, ವಿನೋಬಾ ಭಾವೆ, ಲೋಕನಾಯಕ ಜಯ್‌ಪ್ರಕಾಶ್ ನಾರಾಯಣ್ ಮತ್ತು ಅನೇಕಾನೇಕ ಸರ್ವೋದಯ ಕಾರ್ಯಕರ್ತರ ಮತ್ತು ಸಮಾಜವಾದಿಗಳ ಕಾರ್ಯಕ್ಷೇತ್ರವೂ ಆಗಿದ್ದ ಬಿಹಾರನಲ್ಲಿ ಈಗ ಮದ್ಯಪಾನ ನಿಷೇಧವಾಗಿದೆ. ಸಮಾಜದ ಹಿತವನ್ನು ಬಹುಸುವ ಎಲ್ಲ ಸಹೃದಯರು ಬಿಹಾರ ಸರ್ಕಾರದ ಈ ಕ್ರಮವನ್ನು ಸ್ವಾಗತಿಸಬೇಕು. ಇನ್ನು ಮುಂದೆ ಜನರು ಸ್ವತಃ ಮದ್ಯಪಾನ ಮಾಡುವುದನ್ನು ಬಿಡುವ ಪ್ರಯತ್ನ ಮಾಡಬೇಕು. ಈ ವಿಷಯದಲ್ಲಿ ಜನರಿಗೆ ತಿಳುವಳಿಕೆ ಕೊಡುವ ಕೆಲಸವನ್ನು ರಾಜ್ಯದ ಎಲ್ಲ ಸ್ವಯಂಸೇವಾ ಸಂಸ್ಥೆಗಳು ಮತ್ತು ರಾಜಕೀಯ ಮುಂಖಡರು ಬಿರುಸಾಗಿ ಮಾಡಬೇಕು. ಮದ್ಯಪಾನವನ್ನು ಅನುಷ್ಠಾನಕ್ಕೆ ತರುವ ಮಹತ್ವದ ಕೆಲಸವನ್ನು ಅಬಕಾರಿ ಇಲಾಖೆ ಶ್ರದ್ಧೆಯಿಂದ ಮಾಡಬೇಕು. ಭ್ರಷ್ಟಚಾರ ಮಾಡಲು ಇದೊಂದು ಸದಾವಕಾಶ ಎಂದು ಅಲ್ಲಿನ ಸರ್ಕಾರಿ ನೌಕರರು ಭಾವಿಸದೆ ಆರೋಗ್ಯವಂತ ಸಮಾಜವನ್ನು ಕಟ್ಟಲು ದೊರಕಿರುವ ಸದಾವಕಾಶವೆಂದು ಭಾವಿಸಬೇಕು. ಅಕ್ಕಪಕ್ಕದ ರಾಜ್ಯಗಳು ಕೂಡ ಬಿಹಾರ ಸರ್ಕಾರದೊಂದಿಗೆ ಸಹಕರಿಸಬೇಕು. ಕರ್ನಾಟಕವೂ ಬಿಹಾರವನ್ನು ಅನುಸರಿಸಲಿ.

–ಸುರೇಂದ್ರ ಕೌಲಗಿ

> ನಿಮ್ಮ ಎತ್ತರವನ್ನು ನಿಮ್ಮ ಮನೋಭಾವ ತೀರ್ಮಾನಿಸುತ್ತದೆಯೇ ಹೊರತು ನಿಮ್ಮ ಮನೋಭಿಲಾಶೆಯಲ್ಲ.
> ಅನೇಕರು ರಾಜಕಾರಣಕ್ಕೆ ಒಳ್ಳೆಯ ಭವಿಷ್ಯದೊಂದಿಗೆ ಪ್ರವೇಶ ಮಾಡುತ್ತಾರೆ. ಆದರೆ ಭಯಾನಕ ಹಿನ್ನಲೆಯೊಂದಿಗೆ ಹೊರಬರುತ್ತಾರೆ.

ಜನಪದ ಸೇವಾ ಟ್ರಸ್ಟ್ ಸಮಾಚಾರ

"ಜನಪದ ನಿಲಯದ" ಮಾಲೀಕರಾಗಿದ್ದ ಶ್ರೀ ಪಿ.ಆರ್.ದೇಶಿಕಾಚರ್ಯರ ಮಗ ಶ್ರೀನಿವಾಸ ಮತ್ತು ಅವರ ಪತ್ನಿ ಕಮಲ ಹಾಗೂ ಸಂಬಂಧಿಕರು ಟ್ರಸ್ಟ್ಗೆ ಭೇಟಿ ಕೊಟ್ಟರು ಮತ್ತು ತಮ್ಮ ಮನೆಯಲ್ಲೇಲ್ಲಾ ಓಡಾಡಿ ಸಂತೋಷ ಪಟ್ಟರು. ಸಾವಿರದ ಒಂದು ರೂಪಾಯಿ ಟ್ರಸ್ಟ್‌ಗೆ ದಾನ ಕೊಟ್ಟರು ಶ್ರೀನಿವಾಸರವರಿಗೆ ಆಭಾರಿಯಾಗಿದ್ದೇವೆ.

*****

ಅಮೇರಿಕಾದಿಂದ ಏರಿಕ್ ರೆಕ್ಟರ್ ಮತ್ತು ಅವರ ಪತ್ನಿ ಆಲಿಸನ್ ರೆಕ್ಟರ್ ಎಂಬ ದಂಪತಿಗಳು ಬಂದರು. ಆಲಿಸನ್ ರೆಕ್ಟರ್ ಓರ್ವ ಕಲಾವಿದೆ. ಅವರು ಬ್ರೌನ್ ಯುನಿವರಸಿಟಿಯಲ್ಲಿ ಪೆಂಟಿಂಗನಲ್ಲಿ ಬಿ.ಎ. ಮಾಡಿದ್ದಾರೆ. ಅವರ ಪತಿ ಏರಿಕ್ ಮೈನ್ ಎಂಬಲ್ಲಿ ಚಿಸ್ ತಯಾರಿಸುವ ಉದ್ಯಮ ನಡೆಸುತ್ತಿದ್ದಾರೆ. ಇವರಯ ಟ್ರಸ್ಟ್‌ನಲ್ಲಿ ಎರಡು ದಿನ ಇದ್ದು ಟ್ರಸ್ಟ್‌ನ ಕಾರ್ಯಚಟುವಟಿಕೆ ನೋಡಿದರು. ಒಂದದಿನ ಬಿಡುವುಮಾಡಿಕೊಂಡು ಶ್ರವಣಬೆಳಗೋಳಕ್ಕೆ ಭೇಟಿಕೊಟ್ಟರು. ಟ್ರಸ್ಟ್‌ಗೆ ಧನ ಸಹಾಯವನ್ನೂ ಮಾಡಿದರು. ಆಲಿಸನ್, ಏರಿಕ್‌ರವರಿಗೆ ಟ್ರಸ್ಟ್ ಆಭಾರಿಯಾಗಿದೆ.

*****

ಸಾವಯವ ಬಣ್ಣದ ಖಾದಿಗೆ ವಿಶೇಷ ಮಾರಾಟದ ಮಳಿಗೆಗಳನ್ನು ಕೆಲ ಪಟ್ಟಣಗಳಲ್ಲಿ ಸ್ಥಾಪಿಸಿ ಟ್ರಸ್ಟಿನ ಖಾದಿ ಉತ್ಪಾದನೆಗೆ ನೆರವಾಗುತ್ತಿರುವ ಶ್ರೀ ಅನಂತುರವರು ಮತ್ತು ಬಿಟಿ ಬೀಜಗಳ ವಿರುದ್ಧ ಕೆಲಸಮಾಡುತ್ತಿರುವ ಕವಿತಾ ಟ್ರಸ್ಟ್‌ಗೆ ಭೇಟಿ ನೀಡಿದರು.

*****

ಶ್ರೀರಾಮ ನವಮಿಯನ್ನು ಹೊಸ ಜೀವನ ದಾರಿ ಕೇಂದ್ರಲ್ಲಿ ಆಚರಿಸಲಾಯಿತು. ಅಲ್ಲಿಯ ಎಲ್ಲ ಕೆಲಸಗಾರರು ಉತ್ಸಾಹದಿಂದ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

*****

ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯರು ಮತ್ತು ವಕೀಲರೂ ಆದ ಶ್ರೀ ಬಿ.ಟಿ.ವಿಶ್ವನಾಥ್ ಮತ್ತು ಹಿರಿಯ ವಕೀಲರಾದ ವೈ.ವಿ.ಪಾರ್ಥಸಾರಥಿ ಟ್ರಸ್ಟ್‌ಗು ಮತ್ತು ದತ್ತು ಕೇಂದ್ರಕ್ಕೂ ಭೇಟಿ ಕೊಟ್ಟರು. ವೈ.ವಿ.ಪಾರ್ಥ ಸಾರಥಿಯವರ ಸಾವಿರದ ಒಂದು ರೂಪಾಯಿ ದಾನವಾಗಿ ಕೊಟ್ಟರು. ಟ್ರಸ್ಟ್ ಇವರಿಗೆ ಆಭಾರಿಯಾಗಿದೆ.

*****

ಎಲ್ಲರಿಗೂ ದುರ್ಮುಖಿ ಸವತ್ಸರದ ಸುಭಾಷಯಗಳು

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ.ಎಮ್.ಕೆ.ಶಂಕರ, ಶ್ರೀ ಎಮ್.ಕೆ.ಸುಬ್ಬರಾವ್, – ಬೆಂಗಳೂರು

ಡಾ॥ ಕೆ. ಕಾಳಚನ್ನೇಗೌಡ, – ಮೈಸೂರು

ಶ್ರೀ. ಆರ್.ನಾರಾಯಣಮೂರ್ತಿ, – ಅರಸೀಕೆರೆ

ಶ್ರೀ. ಜನಾರ್ಧನ್, ಹಾಸನ – ಮಾರಗೌಡನಹಳ್ಳಿ

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote,
Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237